ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಗುಂಡ್ಲುಪೇಟೆ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಎಸ್. ಜಿ. ರಾಮದಾಸ ರೆಡ್ಡಿ**

ಲೇಖಕರು

**ಕವಿತಾ ಎ.**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**GUNDLUPETE:** An Introduction Book on Places in Karnataka that Played a Major Role in the Freedom Struggle, Written by Kavita A., Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ : ೨೦೨೨
ಪ್ರತಿಗಳು : ೧೦೦೦
ಬೆಲೆ : ರೂ. ೩೦/-
ಪುಟ : ೫೬

ಮುಖಪುಟ ಚಿತ್ರ : ಮುರಳೀಧರ ವಿ. ರಾಥೋಡ್


ಪ್ರಕಾಶಕರು :
ಕರಿಯಪ್ಪ ಎನ್, ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್,**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು-560 001



# ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



# ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಫಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಭಾರತದ ಸ್ವಾತಂತ್ರ್ಯ ಚಳುವಳಿಯು ಅನನ್ಯವಾದುದು. ಹಿಂಸೆಯ ಮೂಲಕ ಸ್ವಾತಂತ್ರ್ಯ ಗಳಿಸಿದ್ದರೆ ಜಗತ್ತಿನ ನೂರಾರು ಹೋರಾಟಗಳಲ್ಲಿ ಇದೂ ಒಂದಾಗಿರುತ್ತಿತ್ತು. ಸತ್ಯ, ಅಹಿಂಸೆಯೆಂಬ ಶಾಂತಿಮಂತ್ರಗಳ ಮೂಲಕ ಅಖಂಡ ಭಾರತ ಹೋರಾಟ ನಡೆಸಿದ್ದರ ಫಲವಾಗಿ ಬ್ರಿಟಿಷರ ಕಪಿಮುಷ್ಟಿಯಿಂದ ಬಿಡಿಸಿಕೊಂಡು ಸ್ವಾತಂತ್ರ್ಯ ಪಡೆಯಿತು. ರಾಷ್ಟ್ರನಾಯಕರು ಮುಂಚೂಣಿಯಲ್ಲಿ ನಿಂತು ಹೋರಾಟವನ್ನು ಮುನ್ನೆಡೆಸಿದುದರ ಹಿನ್ನೆಲೆಯಲ್ಲಿ ಲಕ್ಷಾಂತರ ಸಾಮಾನ್ಯ ಜನರು ತಮ್ಮ ತನು, ಮನ, ಧನಗಳನ್ನು ಅರ್ಪಿಸಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಗುಂಡ್ಲುಪೇಟೆ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾಥೆಯ ವಿವರಗಳನ್ನು ಸಂಗ್ರಹಿಸುತ್ತಾ ಹೋದಂತೆ, ಇಲ್ಲಿ ಸಾಮಾನ್ಯ ಜನರು ಸಂಘಟಿತರಾಗಿ ಬ್ರಿಟಿಷರನ್ನು ಭಾರತದಿಂದ ಹೊರಹಾಕಲು ನಡೆಸಿದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮತ್ತು ಮೈಸೂರು ಪ್ರಾಂತ್ಯದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆಸಿದ ಹೋರಾಟದಲ್ಲಿ ಭಾಗವಹಿಸಿದರೆಂದು ತಿಳಿದು ಬರುತ್ತದೆ. ಸಾಮಾನ್ಯ ಕೃಷಿಕರು, ಬೀಡಿ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು, ಎಲೆ ಮಾರುವವರು, ಕೂಲಿ ಮಾಡುವವರು ಹೀಗೆ ಸಾಮಾನ್ಯ ಜನರು ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟ, ಪಟ್ಟ ಪಾಡುಗಳನ್ನು ನಾನು ಈ ಪುಸ್ತಕದಲ್ಲಿ ದಾಖಲಿಸಿದ್ದೇನೆ. ಇಂತಹ ಸದವಕಾಶ ಕಲ್ಪಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ನಾನು ಆಭಾರಿ.

ಸಂಪಾದಕರಾದ ಡಾ.ಎಸ್.ಜಿ.ರಾಮದಾಸರೆಡ್ಡಿಯವರು ಸೂಕ್ತ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿರುತ್ತಾರೆ. ಶ್ರೀ ಜಿ.ಮಲ್ಲೇಶ್, ಪ್ರಾಂಶುಪಾಲರು ಹಾಗೂ ಶ್ರೀ ಗಂಗಾಧರ.ಕೆ.ಬಿ. ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗುಂಡ್ಲುಪೇಟೆ, ಇವರು ಕ್ಷೇತ್ರಕಾರ್ಯ ಕೈಗೊಳ್ಳಲು ನೆರವು ನೀಡಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಿಗೆ ಸಂಬಂಧಿಸಿದಂತೆ ಮಾಹಿತಿ, ಭಾವಚಿತ್ರಗಳು

ಹಾಗೂ ದಾಖಲೆಗಳನ್ನು ಒದಗಿಸಿದ ಶ್ರೀ ಮಹೇಶ್ ಚಿಕ್ಕತುಪ್ಪೂರು (ಕಾಳವೀರಪ್ಪನವರ ಮಗ), ಶ್ರೀ ಸತೀಶ್ ಹೊಸೂರು (ಹೆಚ್.ಎಲ್. ನಾಗೇಗೌಡರ ಮೊಮ್ಮಗ), ಶ್ರೀ ಕೆ.ಬಿ. ಪ್ರಭುಸ್ವಾಮಿ ಮತ್ತು ಶ್ರೀಮತಿ ಡಾ.ಮಂಜುಳಾರವರು (ಬಸವನಾಯಕರ ಮಗ ಹಾಗೂ ಸೊಸೆ), ಶ್ರೀ ರಾಚನಾಯಕರು (ಕಾಳನಾಯಕರ ಅಳಿಯ), ಶ್ರೀ ಮುದ್ದುಮಹದೇವ (ಮಾದಯ್ಯನವರ ಮಗ), ಶ್ರೀ ಗೋಪಾಲ್ (ಬಿ. ದೊಡ್ಡೇಗೌಡರ ಮಗ), ಕುಮಾರಿ ತೇಜಸ್ವಿನಿ (ಎ. ಬೋರಯ್ಯನವರ ಮೊಮ್ಮಗಳು), ಲೇಖಕರಾದ ಪಿ.ಸಿ. ರಾಜಶೇಖರ್, ಪತ್ರಾಗಾರ ಇಲಾಖೆಯ ಹಿರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಹಾಗೂ ಸಹಾಯಕ ಪ್ರಾಧ್ಯಾಪಕರಾದ ಸುಂದರೇಶ್‌ರವರಿಗೆ ನನ್ನ ನೆನಕೆಗಳು ಸಲ್ಲುತ್ತವೆ. ಈ ಕಿರುಪುಸ್ತಕ ಬರೆಯಲು ನೆರವಾದ ಎಲ್ಲ ಸಹೃದಯರಿಗೂ ಕೃತಜ್ಞತೆಗಳು.

೨೦.೧೨.೨೦೨೧

**ಕವಿತಾ. ಎ**
ಗುಂಡ್ಲುಪೇಟೆ

## ಪರಿವಿಡಿ

ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೧
ಸ್ವಾತಂತ್ರ್ಯ ಹೋರಾಟದಲ್ಲಿ ಗುಂಡ್ಲುಪೇಟೆ ೧೫
ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟ ೧೭
ಗುಂಡ್ಲುಪೇಟೆಯ ಸ್ವಾತಂತ್ರ್ಯ ಹೋರಾಟದ ಹೆಜ್ಜೆಗುರುತುಗಳು ೨೧
ಬಿ. ದೊಡ್ಡೇಗೌಡ ೨೬
ಜಿ.ಬಿ ಚಿಕ್ಕಣ್ಣ ೨೮
ಹೆಚ್.ಎನ್. ಶ್ರೀಕಂಠಶೆಟ್ಟರು ೨೯
'ಲೋಕಸೇವಕ' ಬಸವನಾಯಕ ೩೧
'ಚಿಕ್ಕತುಪ್ಪೂರಿನ ಗಾಂಧಿ' ಕಾಳವೀರಪ್ಪ ೩೪
ಎ.ಬೋರಯ್ಯ ೩೬
ಹೆಚ್.ಎಲ್.ನಾಗೇಗೌಡ ೩೭
ಬರಗಿ ನಾಗಮಲ್ಲಪ್ಪ ೩೭
ಕರಿಶೆಟ್ಟಿ ೩೮

| | |
|---|---|
| ರಾಚನಾಯಕ | ೩೮ |
| ಪುಟ್ಟವೀರಪ್ಪನಾಯಕ | ೩೯ |
| ಕಾಳನಾಯಕ | ೩೯ |
| ದೊಡ್ಡೇಗೌಡ | ೪೦ |
| ರಂಗನಾಯಕ | ೪೦ |
| ಮಾದಯ್ಯ | ೪೧ |
| ಪಾಪಣ್ಣ | ೪೧ |
| ಮಾಯೇಗೌಡ | ೪೨ |
| ಲಕ್ಷ್ಮಯ್ಯ | ೪೨ |
| ಎಸ್.ಮಾದನಾಯಕ | ೪೨ |
| ನಾಗನಾಯಕ | ೪೩ |
| ಬಾಲಚಂದ್ರಶೆಟ್ಟಿ | ೪೩ |
| ದಶರಥಶೆಟ್ಟರು | ೪೩ |
| ಪರಾಮರ್ಶನ ಗ್ರಂಥಗಳು | ೪೪ |
| ಛಾಯಾಚಿತ್ರಗಳು | ೪೫ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೩ |


# ಸ್ವಾತಂತ್ರ್ಯ ಹೋರಾಟದಲ್ಲಿ ಗುಂಡ್ಲುಪೇಟೆ

ಚಾಮರಾಜನಗರ ಜಿಲ್ಲೆಯು ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದ್ದು, ರಾಜ್ಯದ ದಕ್ಷಿಣದ ಗಡಿಜಿಲ್ಲೆಯಾಗಿದೆ. ಕೇರಳ ಹಾಗೂ ತಮಿಳುನಾಡು ಎರಡೂ ರಾಜ್ಯಗಳೊಂದಿಗೆ ಗಡಿಯನ್ನು ಹಂಚಿಕೊಂಡಿದೆ. ಕ್ರಿ.ಶ.೧೮೧೮ ರವರೆಗೂ 'ಅರಿಕುಠಾರ' ಎಂದು ಕರೆಯಲ್ಪಡುತ್ತಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ' ತಂದೆ ಚಾಮರಾಜ ಒಡೆಯರ್ ರವರು ಕ್ರಿ.ಶ. ೧೭೭೬ ರಲ್ಲಿ ಜನಿಸಿದರು. ಇದರ ನೆನಪಿಗಾಗಿ ಅವರ ಮಗ ಮೂರನೇ ಕೃಷ್ಣರಾಜ ಒಡೆಯರ್ 'ಚಾಮರಾಜನಗರ' ಎಂದು ಮರುನಾಮಕರಣ ಮಾಡಿದರು. ಅಲ್ಲದೇ ಚಾಮರಾಜೇಶ್ವರ ದೇವಾಲಯವನ್ನು ಕ್ರಿ.ಶ. ೧೮೨೮ ರಲ್ಲಿ ನಿರ್ಮಿಸಿದರು. ಕ್ರಿ.ಶ. ೧೮೭೪ ರಿಂದ ೧೯೯೭ ರವರೆಗೆ ಮೈಸೂರು ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದ ಚಾಮರಾಜನಗರವು ೧೯೯೭ ರಲ್ಲಿ ಜಿಲ್ಲೆಯಾಗಿ ರೂಪುಗೊಂಡಿತು. ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಹಾಗೂ ಹನೂರು ತಾಲ್ಲೂಕುಗಳನ್ನು ಒಳಗೊಂಡಿದೆ.

## ಗುಂಡ್ಲುಪೇಟೆಯ ಹಿನ್ನೆಲೆ

ಗುಂಡ್ಲುಪೇಟೆ ತಾಲ್ಲೂಕು ಕರ್ನಾಟಕ ರಾಜ್ಯದ ದಕ್ಷಿಣದ ತುದಿಯಲ್ಲಿದ್ದು, ಪೂರ್ವಕ್ಕೆ ಚಾಮರಾಜನಗರ, ಪಶ್ಚಿಮದಲ್ಲಿ ಕೇರಳ ರಾಜ್ಯ, ಉತ್ತರಕ್ಕೆ ನಂಜನಗೂಡು, ದಕ್ಷಿಣದಲ್ಲಿ ತಮಿಳುನಾಡು ರಾಜ್ಯವಿದೆ. ೧೦ನೇ ಶತಮಾನದಲ್ಲಿ ಗುಂಡ್ಲುಪೇಟೆಗೆ ಕುಡುಗುನಾಡು ಎಂಬ ಹೆಸರಿತ್ತು. ೧೨–೧೩ ನೇ ಶತಮಾನದಲ್ಲಿ 'ಪ್ರಸನ್ನ ವಿಜಯಪುರ' ಎಂಬ ಹೆಸರಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಗುಂಡ್ಲು(ಕೌಂಡಿನ್ಯ)ನದಿಯ ತೀರದಲ್ಲಿದ್ದರಿಂದ ಗುಂಡ್ಲುಪೇಟೆ ಎಂಬ ಹೆಸರು ಬಂದಿದ್ದು. ಮಾದಾಪಟ್ಟಣ ಶಾಸನದಲ್ಲಿ (ಕ್ರಿ.ಶ.೧೭೫೧) ಮೊದಲ ಬಾರಿಗೆ ಕಂಡುಬರುತ್ತದೆ. ರಾಜ್ಯದ ತುತ್ತತುದಿಯಲ್ಲಿರುವ ಗುಂಡ್ಲುಪೇಟೆಯು ಹಿಂದೆ ಮೈಸೂರು ಜಿಲ್ಲೆಯ ಹನ್ನೊಂದು ತಾಲ್ಲೂಕುಗಳ ಪೈಕಿ ಒಂದಾಗಿತ್ತು. ಈಗ

ಚಾಮರಾಜನಗರ ಜಿಲ್ಲೆಯ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ಪೂರ್ವಕ್ಕೆ ಚಾಮರಾಜನಗರ, ಪಶ್ಚಿಮಕ್ಕೆ ಕೇರಳ ರಾಜ್ಯ, ಉತ್ತರದಲ್ಲಿ ನಂಜನಗೂಡು ತಾಲ್ಲೂಕುಗಳು, ದಕ್ಷಿಣದಲ್ಲಿ ತಮಿಳುನಾಡು ರಾಜ್ಯವನ್ನು ಗಡಿಯಾಗಿ ಹೊಂದಿವೆ. ೧೪೦೬.೨ ಚದರ ಮೈಲಿ ವಿಸ್ತೀರ್ಣ ಹೊಂದಿರುವ ಗುಂಡ್ಲುಪೇಟೆ ತಾಲ್ಲೂಕು ೨,೨೩,೦೩೦ ಜನಸಂಖ್ಯೆ ಹೊಂದಿದೆ. ಕಸಬಾ, ಹಂಗಳ, ಬೇಗೂರು ಹಾಗೂ ತೆರಕಣಾಂಬಿ ಎಂಬ ನಾಲ್ಕು ಹೋಬಳಿಗಳಿದ್ದು, ೧೮೧ ಗ್ರಾಮಗಳಿವೆ.

ಗುಂಡ್ಲುಪೇಟೆಯ ರಾಜಕೀಯ ಇತಿಹಾಸವನ್ನು ಗಮನಿಸಿದರೆ ಅದು ಗಂಗರಿಂದ ಆರಂಭವಾಗುತ್ತದೆ. ಗಂಗರ ೧೦ ಶಾಸನಗಳು ದೊರೆತಿದ್ದು, ಅವುಗಳಲ್ಲಿ ಶ್ರೀಪುರುಷ, ಪೆರ್ಮಾಡಿ, ರಾಚಮಲ್ಲರ ಉಲ್ಲೇಖವಿದೆ. ಗಂಗರ ವಂಶಾವಳಿಯನ್ನು ತಿಳಿಸುವ ಶಾಸನವು ಗುಂಡ್ಲುಪೇಟೆ ತಾಲ್ಲೂಕಿನ ದೇವರಹಳ್ಳಿಯಲ್ಲಿ ದೊರಕಿದೆ. ಕೇರಳ ಹಾಗೂ ತಮಿಳುನಾಡಿನ ಗಡಿ ಪ್ರದೇಶವಾದ್ದರಿಂದ ಬಹಳ ಕಾಲ ಚೋಳರ ದಾಳಿಗೆ ತುತ್ತಾಗಿತ್ತು. ಕ್ರಿ.ಶ. ೧೧೦೪ ರಲ್ಲಿ ಚೋಳರಾಜರು ಗಂಗರ ಆಳ್ವಿಕೆಯನ್ನು ಕೊನೆಗಾಣಿಸಿ ಈ ಪ್ರದೇಶದ ಮೇಲೆ ಹಿಡಿತ ಸಾಧಿಸಿದರು. ಕ್ರಿ.ಶ. ೧೧೧೬ ರಲ್ಲಿ ದ್ವಾರಸಮುದ್ರದ ಹೊಯ್ಸಳರ ದೊರೆ ವಿಷ್ಣುವರ್ಧನನು ತಲಕಾಡನ್ನು ಗೆದ್ದು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಈ ಪ್ರಾಂತ್ಯದ ಬಹುತೇಕ ಶಾಸನಗಳು ತಮಿಳಿನಲ್ಲಿದ್ದು, ಮುಂದೆ ಕನ್ನಡಿಗರಾದ ಹೊಯ್ಸಳರು ಸಹ ತಮಿಳಿನಲ್ಲಿಯೇ ಶಾಸನಗಳನ್ನು ಹಾಕಿಸಿದ್ದು ಇದು ಚೋಳರ ಸಾಂಸ್ಕೃತಿಕ ಪ್ರಭಾವಕ್ಕೆ ಒಳಪಟ್ಟಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. ಹೊಯ್ಸಳರ ನಂತರ ಪದಿನಾಲ್ಕು ನಾಡರಸರು ಈ ತಾಲ್ಲೂಕಿನ ಪ್ರಮುಖ ಊರಾದ ತೆರಕಣಾಂಬಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕೆಲ ಕಾಲ ಆಳ್ವಿಕೆ ನಡೆಸಿದರು. ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟು ಕನ್ನಡ ಸಂಸ್ಕೃತಿಯು ಇಲ್ಲಿ ಬೆಳೆಯಲು ಸಾಧ್ಯವಾಯಿತು. ಉಮ್ಮತ್ತೂರಿನ ಪಾಳೆಗಾರರು ಕೆಲವು ವರ್ಷಗಳ ಕಾಲ ಈ ಭಾಗವನ್ನು ಆಳಿದರು. ಗುಂಡ್ಲುಪೇಟೆಯಲ್ಲಿ ಒಡೆಯರ ಆಡಳಿತವು ಕ್ರಿ.ಶ. ೧೬೫೬ ರಲ್ಲಿ ದೊಡ್ಡ ದೇವರಾಜ ಒಡೆಯರ್‌ರವರ ಕಾಲದಿಂದ ಆರಂಭವಾಗಿ ೧೯೪೭ ರವರೆಗೆ ಮುಂದುವರೆಯಿತು.

ಬ್ರಿಟಿಷರು ಪರೋಕ್ಷವಾಗಿ ಈ ಪ್ರದೇಶವನ್ನು ಆಳ್ವಿಕೆ ಮಾಡಲು ಪ್ರಾರಂಭಿಸಿದಾಗ ಗುಂಡ್ಲುಪೇಟೆ ಪ್ರದೇಶವನ್ನು ಕೊಳ್ಳೇಗಾಲ ತಾಲ್ಲೂಕಿಗೆ ಸೇರಿಸಿದರು. ಕೊಳ್ಳೇಗಾಲವು ಆಗ ಕೊಯಮತ್ತೂರು ಜಿಲ್ಲೆಯ ಒಂದು ಪ್ರಮುಖ ತಾಲ್ಲೂಕಾಗಿದ್ದು ಮದ್ರಾಸ್ ಸಂಸ್ಥಾನಕ್ಕೆ ಸೇರಿತ್ತು. ಆಡಳಿತಾತ್ಮಕವಾಗಿ ಈ ಪ್ರದೇಶ ಮೈಸೂರು ಸಂಸ್ಥಾನಕ್ಕೆ ಒಳಪಡದೆ ಇದ್ದರೂ ಇಲ್ಲಿನ ಜನರು ಮಾನಸಿಕವಾಗಿ ಮೈಸೂರು ಸಂಸ್ಥಾನಕ್ಕೆ ಸೇರಿದವರಾಗಿದ್ದರು. ಈ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟದ ಹೆಜ್ಜೆ ಜಾಡುಗಳನ್ನು ಅರಸುತ್ತಾ ಹೋದಂತೆ ಇದು ನಮ್ಮ ಅರಿವಿಗೆ ಬರುತ್ತದೆ. ಗುಂಡ್ಲುಪೇಟೆಯ ದೇಹ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದರೂ ಆತ್ಮವು ಮೈಸೂರು ಪ್ರಾಂತ್ಯದೊಂದಿಗೆ ಮಿಳಿತವಾಗಿತ್ತು. ಬ್ರಿಟಿಷರ ದಬ್ಬಾಳಿಕೆಯಿಂದ ವಿಮುಕ್ತಿ ಪಡೆಯಲು ಮೈಸೂರು ಪ್ರಾಂತ್ಯವು ನಡೆಸಿದ ಹೋರಾಟದಲ್ಲಿ ಮೈಸೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ಈ ಪ್ರದೇಶದ ಹೋರಾಟದ ಗುರುತುಗಳನ್ನು ಕಾಣಬಹುದಾಗಿದೆ. ಹಾಗಾಗಿ ಇಲ್ಲಿನ ಚಳುವಳಿಗಳನ್ನು ಮದ್ರಾಸ್ ಪ್ರಾಂತ್ಯದೊಂದಿಗೆ ಗುರುತಿಸದೆ ಮೈಸೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಗಳೊಂದಿಗೆ ಗುರುತಿಸುವುದು ಹೆಚ್ಚು ಸೂಕ್ತವಾದುದು. ಮೈಸೂರು ಕಾಂಗ್ರೆಸ್‌ನ ನಾಯಕರು ಗುಂಡ್ಲುಪೇಟೆಯಲ್ಲಿ ಹೋರಾಟವನ್ನು ಪ್ರಖರಗೊಳಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು.

## ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟ

ಮಾನವನು ಮೂಲತಃ ಸ್ವಾತಂತ್ರ್ಯ ಪ್ರೇಮಿ. ಅನಿವಾರ್ಯ ಕಾರಣಗಳಿಂದ ಮಾನಸಿಕವಾಗಿ, ದೈಹಿಕವಾಗಿ ತಾನು ಮತ್ತೊಬ್ಬರ ಅಧೀನಕ್ಕಾಗಿ ಒಳಪಟ್ಟದ್ದೇ ಆದರೆ ಅಂತಹ ಸನ್ನಿವೇಶವನ್ನು ಕೊನೆಗಾಣಿಸಲು ಪ್ರಯತ್ನಿಸುವುದು ಅವನ ಸಹಜ ಸ್ವಭಾವವಾಗಿದೆ. ಭರತಭೂಮಿಯು ಸಹೃದಯತೆಯ ಸಹಶೃತ ಲೋಕ. ತನ್ನ ಸಹೃದಯತೆಯ ಕಾರಣದಿಂದಾಗಿಯೇ ವಿಶ್ವದ ವೈವಿಧ್ಯಮಯ ಜನತೆಯನ್ನು ಒಂದಲ್ಲ ಒಂದು ಕಾರಣಕ್ಕಾಗಿ ತಮ್ಮ ದೇಶದಲ್ಲಿ ನೆಲೆಸಲು ಆಹ್ವಾನ ಕೊಟ್ಟಿತು. ಕ್ರಮೇಣ ಅವರ ದಬ್ಬಾಳಿಕೆಗೂ ಗುರಿಯಾಯಿತು. ದಬ್ಬಾಳಿಕೆಯಿಂದ ಬಿಡುಗಡೆಯಾಗಲು ಹೋರಾಟ ಅನಿವಾರ್ಯವಾಯಿತು. ಸಾವಿರಾರು ಜನರ ತ್ಯಾಗ ಬಲಿದಾನಗಳಿಂದ ಅಂತಿಮವಾಗಿ ಸ್ವಾತಂತ್ರ್ಯ ಪಡೆಯಿತು.

ಮೈಸೂರು ಪ್ರಾಂತ್ಯದಲ್ಲಿ ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಹೈದರ್ ಆಲಿ ಹಾಗೂ ಟಿಪ್ಪುಸುಲ್ತಾನ ಕೆಚ್ಚೆದೆಯಿಂದ ಹೋರಾಡಿದರಾದರೂ ವಿಜಯವನ್ನು ಗಳಿಸುವುದು ಸಾಧ್ಯವಾಗಲಿಲ್ಲ. ೧೭೯೯ ರಲ್ಲಿ ಟಿಪ್ಪು ಮರಣದ ನಂತರ

ಮೈಸೂರು ಸಂಸ್ಥಾನವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರಿಗೆ ಒಪ್ಪಿಸಿದಾಗ ಅವರಿಗೆ ಕೇವಲ ಐದು ವರ್ಷ. ಅವರ ಪರವಾಗಿ ದಿವಾನ್ ಪೂರ್ಣಯ್ಯನವರು ಆಡಳಿತ ನಡೆಸಿದರು. ಸಂಸ್ಥಾನವು ಬ್ರಿಟಿಷರ ಆಶ್ರಿತ ರಾಜ್ಯವಾಗಿ ಬ್ರಿಟಿಷ್ ಸೇನಾ ತುಕಡಿಯನ್ನು ಇರಿಸಿಕೊಳ್ಳಬೇಕಾಯಿತು. ರಾಜನಿಗೆ ಮಾರ್ಗದರ್ಶನ ಮಾಡಲು ರೆಸಿಡೆಂಟ್ ಎಂಬ ಅಧಿಕಾರಿಯನ್ನು ಬ್ರಿಟಿಷ್ ಸರ್ಕಾರ ನೇಮಿಸಿತು. ೧೮೩೦–೩೧ ರಲ್ಲಿ ನಡೆದ ನಗರ ದಂಗೆಯು ದೊಡ್ಡಬಳ್ಳಾಪುರ, ಚಿಕ್ಕನಾಯಕನಹಳ್ಳಿ ಮುಂತಾದ ಭಾಗಗಳಿಗೂ ಹರಡಿ ರಾಜರಿಗೆ ಅಪಖ್ಯಾತಿಯನ್ನು ತಂದಿತು. ಆಗ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಸಂಸ್ಥಾನದ ಆಡಳಿತವನ್ನು ತಾನೇ ವಹಿಸಿಕೊಂಡು ಮಹಾರಾಜರ ಪರವಾಗಿ ಕಮೀಶನರ್ ಎಂಬ ಅಧಿಕಾರಿಗೆ ಆಡಳಿತ ಒಪ್ಪಿಸಿತು. ಹೀಗೆ ನೇಮಕವಾದ ಕಮೀಶನರುಗಳಲ್ಲಿ ಮಾರ್ಕ್ ಕಬ್ಬನ್ ಹಾಗೂ ಲುವಿನ್ ಬೌರಿಂಗ್‌ರವರು ಸಾರ್ವಜನಿಕರ ಸ್ತುತಿಗೆ ಪಾತ್ರರಾಗುವಂತೆ ಉತ್ತಮ ಆಡಳಿತ ನೀಡಿದರು.

೧೮೫೭–೫೮ ರ ಅವಧಿಯಲ್ಲಿ ಮುಂಬಯಿ, ಮೈಸೂರು ಹಾಗೂ ಹೈದರಾಬಾದ್ ಸಂಸ್ಥಾನದಲ್ಲಿಯೂ ಅನೇಕ ಹೋರಾಟಗಳು ನಡೆದವು. ಸುರಪುರದ ವೆಂಕಟಪ್ಪನಾಯಕ, ನರಗುಂದದ ಬಾಬಾಸಾಹೇಬ, ಮುಂಡರಗಿಯ ಭೀಮರಾಯ, ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ಹೋರಾಡಿದರು. ಇವರನ್ನು ಹತ್ತಿಕ್ಕುವಲ್ಲಿ ಬ್ರಿಟಿಷರು ಯಶಸ್ವಿಯಾದರು. ನಂತರದ ದಿನಗಳಲ್ಲಿ ಆರ್ಯಸಮಾಜ, ಬ್ರಹ್ಮಸಮಾಜ, ಥಿಯಾಸಫಿಕಲ್ ಸೊಸೈಟಿಯ ಶಾಖೆಗಳು ಪ್ರಾರಂಭವಾಗಿ ಹೊಸ ವಿಚಾರಗಳನ್ನು ಜನರಲ್ಲಿ ಬಿತ್ತಿದವು. ಲೋಕಮಾನ್ಯ ಬಾಲಗಂಗಾಧರ ತಿಲಕರು, ದಾದಾಬಾಯಿ ನವರೋಜಿಯವರು ೧೯೦೩ ರಲ್ಲಿ ಧಾರವಾಡದಲ್ಲಿ ನಡೆದ ರಾಜ್ಯ ರಾಜಕೀಯ ಸಮ್ಮೇಳನಕ್ಕೆ ಬಂದಿದ್ದರು. ೧೯೦೫–೦೬ ರಲ್ಲಿ ವಂಗಭಂಗ ಚಳುವಳಿಯ ಅಂಗವಾಗಿ ತಿಲಕರು ಕರ್ನಾಟಕಕ್ಕೆ ಬಂದಿದ್ದರು. 'ಕರ್ನಾಟಕದ ಸಿಂಹ' ಗಂಗಾಧರರಾವ್ ದೇಶಪಾಂಡೆಯವರು, ಶ್ರೀನಿವಾಸರಾವ್ ಕೌಜಲಗಿಯವರು, ಆಲೂರು ವೆಂಕಟರಾಯರು ಮೊದಲಾದವರು ಸ್ವದೇಶಿ ಚಳುವಳಿ ಆರಂಭಿಸಿ, ಬಿರುಸಿನ ಪ್ರಚಾರವನ್ನು ಕೈಗೊಂಡರು. ಹೆಂಡದಂಗಡಿಯ ಮುಂದೆ ಪಿಕೆಟಿಂಗ್ ನಡೆಸುವುದು. ವಿದೇಶಿ ವಸ್ತ್ರಗಳನ್ನು ಸುಡುವುದು, ಸ್ವದೇಶಿ ವಸ್ತುಗಳನ್ನು ಮಾತ್ರ ಬಳಸುವುದು, ರಾಷ್ಟ್ರೀಯ ಶಾಲೆಗಳನ್ನು ತೆರೆಯುವುದು ಹೀಗೆ ರಚನಾತ್ಮಕ ಕಾರ್ಯಕ್ರಮಗಳನ್ನು



ಹಮ್ಮಿಕೊಂಡರು. ಈ ಸಮಯದಲ್ಲಿ ಸುಮಾರು ೫೦ ರಾಷ್ಟ್ರೀಯ ಶಾಲೆಗಳು ಸ್ಥಾಪನೆಯಾದವು.

ದಿನನಿತ್ಯದ ಅಗತ್ಯವಾಗಿದ್ದ ಸಕ್ಕರೆ ಹಾಗೂ ಚಹಾದ ಬಳಕೆಯನ್ನು ನಿಲ್ಲಿಸಿದರು. ಸ್ವದೇಶಿ ವಸ್ತುಗಳ ಅಂಗಡಿಗಳು ಸ್ಥಾಪನೆಯಾದವು. ೧೯೨೦ ರಲ್ಲಿ ನಾಗಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಕೈಗೊಂಡ ನಿರ್ಣಯದಂತೆ ಕರ್ನಾಟಕದಲ್ಲಿ ಪ್ರಾಂತೀಯ ಕಾಂಗ್ರೆಸ್ ಸ್ಥಾಪನೆಯಾಯಿತು. ಗಂಗಾಧರರಾವ್ ದೇಶಪಾಂಡೆಯವರು ಮೊದಲ ಅಧ್ಯಕ್ಷರಾದರು. ೧೯೨೦ ರಲ್ಲಿ ಗಾಂಧೀಜಿಯವರು ಪ್ರವಾಸ ಕೈಗೊಂಡು ಬೆಳಗಾವಿ, ಬೆಂಗಳೂರು, ಮಂಗಳೂರುಗಳಿಗೆ ಭೇಟಿ ನೀಡಿದರು. ಇದು ಕಾಂಗ್ರೆಸ್ಸಿನ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿತು. ೧೯೨೧ ರಲ್ಲಿ ಗಾಂಧೀಜಿಯವರು ಅಸಹಕಾರ ಚಳುವಳಿಗೆ ಕರೆನೀಡಿದಾಗ ಕರ್ನಾಟಕದ ಜನರು ಅಮೋಘವಾಗಿ ಸ್ಪಂದಿಸಿದರು. ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿದರು. ಸರ್ಕಾರಿ ಹುದ್ದೆಗಳಲ್ಲಿ ಇದ್ದವರು ರಾಜೀನಾಮೆ ನೀಡಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಚೌರಿಚೌರಾ ಘಟನೆಯಿಂದ ನೊಂದು ಗಾಂಧೀಜಿಯವರು ಚಳುವಳಿಯನ್ನು ಹಿಂತೆಗೆದುಕೊಂಡರು. ಕರ್ಮವೀರ, ಕರ್ನಾಟಕ ವೃತ್ತ, ಕರ್ನಾಟಕ ವೈಭವ, ರಾಜಹಂಸ ಮೊದಲಾದ ಪತ್ರಿಕೆಗಳು ಜನಸಾಮಾನ್ಯರಲ್ಲಿ ರಾಷ್ಟ್ರೀಯತೆಯನ್ನು ಬೆಳೆಸುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದವು.

೧೯೨೪ ರಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ ಅಧಿವೇಶನವು ಬೆಳಗಾವಿಯಲ್ಲಿ ನಡೆದು ಅದರ ಅಧ್ಯಕ್ಷತೆಯನ್ನು ಗಾಂಧೀಜಿಯವರು ವಹಿಸಿದ್ದರು. ಇದರಿಂದ ಕಾಂಗ್ರೆಸ್ಸಿನ ಕಾರ್ಯಕರ್ತರು ಮತ್ತಷ್ಟು ಹುರುಪಿನೊಂದಿಗೆ ಹೋರಾಟದಲ್ಲಿ ತೊಡಗಿಸಿಕೊಂಡರು. ೧೯೩೦ ರಲ್ಲಿ ಐತಿಹಾಸಿಕ ದಂಡಿಯಾತ್ರೆ, ಉಪ್ಪಿನ ಸತ್ಯಾಗ್ರಹಗಳು ನಡೆದವು. ಕಾನೂನುಭಂಗ ಚಳುವಳಿಯು ಕಾಳ್ಗಿಚ್ಚಿನಂತೆ ಹಬ್ಬಿತು. ಮೈಸೂರು ಸಂಸ್ಥಾನದಿಂದ ತಾತಾಚಾರ್, ಎಂ.ಎನ್. ಜೋಯಿಸ್, ಸುಬ್ಬಮ್ಮ ಜೋಯಿಸ್ ಮೊದಲಾದವರು ಸ್ವಯಂ ಸೇವಕರಾಗಿ ಭಾಗವಹಿಸಿದ್ದರು. ಅರಣ್ಯ ಸತ್ಯಾಗ್ರಹ, ಕರ ನಿರಾಕರಣೆ ಚಳುವಳಿಗಳಲ್ಲಿ ಸಾಮಾನ್ಯ ಜನರು ಭಾಗವಹಿಸಿದರು.

೧೯೩೪ ರಲ್ಲಿ ಗಾಂಧೀಜಿಯವರು ನಂಜನಗೂಡಿನ ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಹಾಗೂ ತಗಡೂರಿಗೆ ಭೇಟಿ ನೀಡಿದ್ದರು. ಗಾಂಧೀಜಿಯವರ ಬ್ರಿಟಿಷರ ದಬ್ಬಾಳಿಕೆಯನ್ನೂ, ಸ್ವಾತಂತ್ರ್ಯದ ಮಹತ್ವವನ್ನೂ

ಜನಸಾಮಾನ್ಯರಿಗೆ ಅರ್ಥವಾಗುವಂತೆ ವಿವರಿಸುತ್ತಿದ್ದರು. ಹರಿಜನರ ಉದ್ಧಾರಕ್ಕಾಗಿ ಎಲ್ಲರೂ ಪಣತೊಡಬೇಕೆಂದು ಕರೆ ನೀಡಿದರು. ಜನರು ಭಾವನಾತ್ಮಕವಾಗಿ ಸ್ಪಂದಿಸಿದರು, ತಾವೂ ಸ್ಫೂರ್ತಿ ಪಡೆದರು. ಅಷ್ಟೇ ಅಲ್ಲದೇ ತಮ್ಮ ತಮ್ಮ ಹಳ್ಳಿಗಳಿಗೆ ಗಾಂಧೀಜಿಯವರ ವಿಚಾರಗಳನ್ನು ತಲುಪಿಸಿದರು. ಸ್ವಾತಂತ್ರ್ಯದ ಹಂಬಲ ಈ ಮೂಲಕ ಹಳ್ಳಿಹಳ್ಳಿಗಳಿಗೂ ತಲುಪಿತು.

೧೯೩೭ರಲ್ಲಿ ಜವಹರಲಾಲ್ ನೆಹರೂರವರು ಮೈಸೂರಿಗೆ ಭೇಟಿ ನೀಡಿದಾಗ ಮಾಡಿದ ಭಾಷಣವು ಗಮನಾರ್ಹವಾದುದು. "ಮೈಸೂರಿನವರೇ, ನೀವು ಜವಾಬ್ದಾರಿಯುತವಾದ ಸರ್ಕಾರಕ್ಕಾಗಿ ಎಳ್ಳಷ್ಟೂ ಪ್ರಯತ್ನ ಪಟ್ಟಿಲ್ಲ. ನೀವು ಪ್ರಯತ್ನ ಪಡದಿದ್ದರೆ ಹೊರಗಿನವರು ನಿಮ್ಮ ಸಹಾಯಕ್ಕೆ ಬರುವರೇ?" ಎಂದು ಜನತೆಯನ್ನು ಪ್ರಶ್ನಿಸಿದರು. ಬೆಂಗಳೂರಿನಲ್ಲಿ ನಡೆದ ಸಭೆಯೊಂದರಲ್ಲಿ "ನಮಗೆ ಸ್ವಾತಂತ್ರ್ಯ ಇಂದೇ ಬರುವುದೋ, ನಾಳೆ ಬರುವುದೋ ನಾನು ಹೇಳಲಾರೆ. ಆದರೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳುವ ಶಕ್ತಿ ನಮಗಿದೆ ಎಂಬುದು ನನಗೆ ಗೊತ್ತಿದೆ. ಲಾಯರುಗಳ ಯುಕ್ತಿವಾದದಿಂದ ಸ್ವರಾಜ್ಯ ಬರುವುದಿಲ್ಲ. ಜಯಜಯಕಾರಗಳಿಂದ ಬರುವುದಿಲ್ಲ. ಆದರೆ ಸ್ಥಿರವಾದ ಕಾರ್ಯಕ್ರಮಗಳಿಂದ ಬರುವುದು. ನಮಗೆ ಧೈರ್ಯ ಸಾಹಸಗಳು ಬೇಕು. ಶಕ್ತಿಯನ್ನು ಶೇಖರಿಸಿಕೊಳ್ಳಿ, ಮುಂದೆ ದೇಶಮಾತೆಯು ನಿಮ್ಮನ್ನು ಕರೆದರೆ ನೀವು ಸಿದ್ಧರಾಗಿರಬೇಕು. ಇದೇ ನನ್ನ ಪ್ರಾರ್ಥನೆ" ಎಂದರು. ಇದು ಜನರನ್ನು ಪ್ರಭಾವಿಸಿತು.

೧೯೩೮ರಲ್ಲಿ ಶಿವಪುರದಲ್ಲಿ ನಡೆದ ಸತ್ಯಾಗ್ರಹವು ಇಡೀ ದೇಶದ ಗಮನ ಸೆಳೆಯಿತು. ೧೯೩೮ ಏಪ್ರಿಲ್ ೧೦ ರಿಂದ ಒಂದು ವಾರದವರೆಗೆ ಈ ಐತಿಹಾಸಿಕ ಸತ್ಯಾಗ್ರಹವು ನಡೆಯಿತು. ಸದರಿ ವರ್ಷ ಗುಜರಾತಿನ ಹರಿಹರಪುರದಲ್ಲಿ ನಡೆದ ಅಧಿವೇಶನಕ್ಕೆ ಇದು ಪರ್ಯಾಯವಾಗಿತ್ತು. ಆಗ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಟಿ.ಸಿದ್ಧಲಿಂಗಯ್ಯನವರು ನಿಷೇಧಾಜ್ಞೆಯನ್ನು ಮುರಿದು ತ್ರಿವರ್ಣ ಧ್ವಜವನ್ನು ಹಾರಿಸಿದರು. ಪೊಲೀಸರು ಸತ್ಯಾಗ್ರಹಿಗಳನ್ನು ಬಂಧಿಸಿ ಜೈಲಿಗೆ ಕಳುಹಿಸಿದರು. ಶಿವಪುರ ಅಧಿವೇಶನವು ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯೂ ಸೇರಿದಂತೆ ೧೮ ನಿರ್ಣಯಗಳನ್ನು ಅಂಗೀಕರಿಸಿತು. ಏಪ್ರಿಲ್ ೨೫, ೧೯೩೮ ರಂದು ವಿದುರಾಶ್ವತ್ಥದಲ್ಲಿ ನಡೆದ ದುರಂತವು ಹೋರಾಟಗಾರರನ್ನು ದಿಗ್ಭ್ರಮೆಗೊಳಿಸಿತು. ಶಾಂತಿಯುತವಾಗಿ



ಸಭೆ ಸೇರಿದ್ದ ಕಾರ್ಯಕರ್ತರ ಮೇಲೆ ಪೊಲೀಸರು ಗೋಲಿಬಾರ್ ನಡೆಸಿ ೩೫ ಜನ ಪ್ರಾಣತೆತ್ತರು. ಈ ಘಟನೆಯು ಹೋರಾಟಕ್ಕೆ ಧೃಢ ಸಂಕಲ್ಪವನ್ನು ತಂದುಕೊಟ್ಟಿತು.

## ಗುಂಡ್ಲುಪೇಟೆಯ ಸ್ವಾತಂತ್ರ್ಯ ಹೋರಾಟದ ಹೆಜ್ಜೆ ಗುರುತುಗಳು

ಭಾರತದ ಸ್ವಾತಂತ್ರ್ಯ ಹೋರಾಟವು ಜಗತ್ತಿನ ಇತಿಹಾಸದಲ್ಲಿ ಒಂದು ವಿನೂತನ ಹಾಗೂ ವಿಶಿಷ್ಟವಾದ ಹೋರಾಟವಾಗಿದೆ. ಮದ್ದುಗುಂಡುಗಳ ಸಿಡಿತವಿಲ್ಲದೆ, ಕತ್ತಿ ಗುರಾಣಿಗಳನ್ನು ಝಳಪಿಸದೆ ಸತ್ಯ, ಅಹಿಂಸೆ ಮೊದಲಾದ ಶಾಂತಿ ಮಂತ್ರಗಳನ್ನು ಆಯುಧವಾಗಿ ಹೊಂದಿದ್ದ ಚಳುವಳಿ. ರಣರಂಗದಲ್ಲಿ ಯುದ್ಧವು ನಡೆದಿದ್ದರೆ ನೂರಾರು ಹಿಂಸಾತ್ಮಕ ಯುದ್ಧಗಳಲ್ಲಿ ಇದೂ ಒಂದಾಗಿರುತ್ತಿತ್ತು. ಚಳುವಳಿಯ ಉದ್ದೇಶವು ಸ್ವಾತಂತ್ರ್ಯ ಗಳಿಕೆಯೇ ಆದರೂ ಅದಕ್ಕೆ ಅನುಸರಿಸಿದ ಮಾರ್ಗವು ಜಗತ್ತಿನ ಹೋರಾಟಗಳಲ್ಲಿ ಹೊಸ ಮೈಲಿಗಲ್ಲು. ಗಾಂಧೀಜಿಯವರ 'ಸತ್ಯಾಗ್ರಹ' ಎಂಬ ಅಸ್ತ್ರವು ಬ್ರಿಟಿಷರ ನಿರಂಕುಶ ಅಧಿಕಾರವನ್ನು ಅಲುಗಾಡಿಸುವಲ್ಲಿ ಸಫಲವಾಯಿತು. ಭಾರತೀಯರ ಮಾನ ಪ್ರಾಣ ಹಾನಿಯಾಗದಂತೆ, ಅವರ ಅಭಿಮಾನ, ಶೌರ್ಯಗಳು ಪ್ರಖರವಾಗುವಂತೆ ಮಾಡಿದ ಚಳುವಳಿ ಇದಾಗಿತ್ತು. ಕೋಟ್ಯಾಂತರ ಭಾರತೀಯರು ಪಾಲ್ಗೊಂಡರು. ಭಾರತದ ಮೂಲೆ ಮೂಲೆಗಳಿಗೂ, ಹಳ್ಳಿ ಹಳ್ಳಿಗಳಿಗೂ ವ್ಯಾಪಿಸಿತು. ಇಂತಹ ಅನೇಕ ರಾಷ್ಟ್ರ ನಾಯಕರ ಹೆಸರುಗಳು ಚಿರಸ್ಥಾಯಿಯಾಗಿ ಉಳಿದಿವೆ. ಭಾರತವು ವಿದೇಶೀಯರ ಸಂಕೋಲೆಗಳಿಂದ ಬಿಡಿಸಿಕೊಳ್ಳುವುದರ ಹಿಂದೆ ಲಕ್ಷಾಂತರ ಅನಾಮಧೇಯ ಹೋರಾಟಗಾರರ ನೆತ್ತರು ಹರಿದಿದೆ. ಊರು ಕೇರಿ, ಬಡವ ಬಲ್ಲಿದ, ಹೆಣ್ಣು ಗಂಡು ಎನ್ನದೆ ದೇಶವೇ ಒಂದಾಗಿ ಹೋರಾಡಿತು. ಬ್ರಿಟಿಷರ ಲಾಠಿಗಳಿಗೆ ತಲೆಕೊಟ್ಟವರು, ಗುಂಡಿಗೆ ಎದೆಯೊಡ್ಡಿ ಪ್ರಾಣ ಕಳೆದುಕೊಂಡವರು ಸಾವಿರಾರು ಮಂದಿ. ಸತ್ಯಾಗ್ರಹ, ಉಪವಾಸ, ವನವಾಸ, ಜೈಲುವಾಸಗಳನ್ನು ಅನುಭವಿಸಿ ಯಾವುದಕ್ಕೂ ಜಗ್ಗದೆ ಜನ ತಮ್ಮನ್ನು ಹೋರಾಟಕ್ಕೆ ಅರ್ಪಿಸಿಕೊಂಡರು. ತನು ಮನ ಧನಗಳನ್ನು ಧಾರೆಯೆರೆದು ಹೋರಾಡಿದ ಎಷ್ಟೋ ಜನರ ವಿವರಗಳು ಇಂದು ಲಭ್ಯವಿಲ್ಲ. ಗುಂಡ್ಲುಪೇಟೆಯ ಸ್ವಾತಂತ್ರ್ಯ ಹೋರಾಟವು ಜನಸಾಮಾನ್ಯರ ಹೋರಾಟದ ಗಾಥೆಯಾಗಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳು, ಕೃಷಿಕರು, ಚಿಲ್ಲರೆ ವ್ಯಾಪಾರಿಗಳು, ಬೀಡಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಎಲೆ ಮಾರುವವರು, ಬೀಡಿ ಕಟ್ಟುವ

ಮಹಿಳೆಯರು ಹೀಗೆ ಸಾಮಾನ್ಯರಲ್ಲಿ ಸಾಮಾನ್ಯರು ಭಾರತಾಂಬೆಯ ವಿಮೋಚನೆಗಾಗಿ ಹೋರಾಡಿದರು. ಮನೆಯಲ್ಲಿ ಕಡುಬಡತನ, ಕುಟುಂಬದವರ ವಿರೋಧವಿದ್ದರೂ ಅದನ್ನು ಲೆಕ್ಕಿಸದೆ ಚಳುವಳಿಗೆ ಧುಮುಕಿದರು. ಬ್ರಿಟಿಷರ ಬೂಟುಗಾಲಿನ ಏಟು ತಿಂದರು, ಲಾಠಿಯೇಟಿನ ರುಚಿ ಕಂಡರು. ಜೈಲು ಸೇರಿ ಅಲ್ಲಿ ಜೈಲಿನ ಅಧಿಕಾರಿಗಳ ದೌರ್ಜನ್ಯದ ನೋವನ್ನು ಉಂಡರು. ಇಂತಹ ಮಕ್ಕಳನ್ನು ಪಡೆದ ಈ ತಾಯ್ನೆಲವು ನಿಜಕ್ಕೂ ಧನ್ಯತೆಯನ್ನು ಅನುಭವಿಸಿದ ಕಾಲವದು. ಮುನ್ನೆಲೆಗೆ ಬಂದ ಹೆಸರುಗಳು ಕೆಲವೇ ಕೆಲವು. ಹೆಸರೇ ಇಲ್ಲದೇ ಹಿನ್ನೆಲೆಗೆ ಸರಿದು ಸಂದುಹೋದ ಜೀವಗಳು ನೂರಾರು.

ಗುಂಡ್ಲುಪೇಟೆಯಲ್ಲಿ ಬಿ.ದೊಡ್ಡೇಗೌಡರ ನೇತೃತ್ವದಲ್ಲಿ ಕಾಂಗ್ರೆಸ್ ಸ್ಥಾಪನೆಯಾಗಿ ಸಕ್ರಿಯವಾಗಿ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಬಹಳ ಕಾಲ ನೇರವಾಗಿ ಚಳುವಳಿ ನಡೆಯದಿದ್ದರೂ ಚರಕ, ಖಾದಿ, ಹರಿಜನರ ಉದ್ಧಾರ ಹೀಗೆ ರಚನಾತ್ಮಕವಾಗಿ ಅನೇಕ ಕಾರ್ಯಕ್ರಮಗಳಲ್ಲಿ ಜನರು ನಿರತರಾಗಿದ್ದರು. ೧೯೪೨ ರಲ್ಲಿ ಗಾಂಧೀಜಿಯವರು ಕ್ವಿಟ್ ಇಂಡಿಯಾ ಚಳುವಳಿಗೆ ಕರೆಕೊಟ್ಟಾಗ ಇಡೀ ದೇಶವೇ ಅವರ ಕರೆಗೆ ಓಗೊಟ್ಟಿತು. ಹಳ್ಳಿಹಳ್ಳಿಗಳಲ್ಲಿಯೂ ಜನರು ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಕೈಜೋಡಿಸಿದರು. ತಗಡೂರು ರಾಮಚಂದ್ರರಾಯರು, ಟಿ.ಎಸ್.ಸುಬ್ಬಣ್ಣ, ಎಂ.ಎನ್. ಜೋಯಿಸ್. ಮರಿಯಪ್ಪನವರು ಮೊದಲಾದ ನಾಯಕರು ಗುಂಡ್ಲುಪೇಟೆಗೆ ಭೇಟಿ ನೀಡಿ ಇಲ್ಲಿರುವ ಹುಣಸೆತೋಪಿನಲ್ಲಿ ಜನರನ್ನು ಉದ್ದೇಶಿಸಿ ಭಾಷಣ ಮಾಡಿದರು. ಆಗಾಗ್ಗೆ ಭೇಟಿಕೊಟ್ಟು ಚಳುವಳಿಯು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಮುಂದಿನ ಹೋರಾಟದ ರೂಪುರೇಷೆಗಳನ್ನು ಹೆಣೆಯುತ್ತಿದ್ದರು. ಬಿ. ದೊಡ್ಡೇಗೌಡರು ಚಳುವಳಿಯ ನೇತೃತ್ವ ವಹಿಸಿದ್ದರು. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿದರು. ಕಾರ್ಮಿಕರು ದುಡಿಮೆಗೆ ಹಾಜರಾಗದೆ ಹೋರಾಟದಲ್ಲಿ ತೊಡಗಿಸಿಕೊಂಡರು. ಪ್ರತಿದಿನ ಬೆಳಗ್ಗೆ ಪ್ರಭಾಪೇರಿಯು ಟೌನ್‌ಹಾಲ್‌ನಿಂದ ಹೊರಡುತ್ತಿತ್ತು. ಮುಖ್ಯರಸ್ತೆಯಲ್ಲಿ ಸಾಗಿ ಮಾರಿಗುಡಿ ಬಳಸಿ ವಿಜಯ ನಾರಾಯಣಸ್ವಾಮಿಯ ದೇವಾಲಯವನ್ನು ತಲುಪುತ್ತಿತ್ತು. ಅಲ್ಲಿಂದ ಮುಖ್ಯರಸ್ತೆಯ ಮೂಲಕ ಮತ್ತೆ ಟೌನ್‌ಹಾಲ್ ಬಳಿಗೆ ಹಿಂದಿರುಗುತ್ತಿದ್ದರು. ಇದು ದಿನನಿತ್ಯ ಚಾಚೂ ತಪ್ಪದೇ ನಡೆಯುತ್ತಿತ್ತು. ಹೆಂಡದ ಅಂಗಡಿಗಳಿಗೆ ಬೆಂಕಿ ಹಚ್ಚುವುದು. ಸ್ವಾತಂತ್ರ್ಯದ ಹಾಡುಗಳನ್ನು ಹಾಡುತ್ತಾ



ಜೈಕಾರ ಕೂಗುತ್ತಾ ಮೆರವಣಿಗೆ ಹೊರಡುವುದು. ಖಾದಿ ಬಟ್ಟೆ ಹಾಗೂ ಗಾಂಧಿ ಟೋಪಿಯ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಇಂತಹ ಚಟುವಟಿಕೆಗಳು ತಾಲ್ಲೂಕಿನಾದ್ಯಂತ ನಡೆದವು. ಜನರು ಸರ್ಕಾರದ ಲೋಪದೋಷಗಳ ಕುರಿತು ಮಾತನಾಡುತ್ತಿದ್ದರು. ಮುಷ್ಕರಗಳು, ಪ್ರತಿಭಟನೆಗಳು ದಿನನಿತ್ಯದ ಚಟುವಟಿಕೆಗಳಾದವು. ಪತ್ರಿಕೆಗಳಲ್ಲಿ ಪ್ರಕಟವಾಗುವ ಸುದ್ದಿಗಳನ್ನು ಜನರು ವಿದ್ಯಾವಂತ ಯುವಕರಿಂದ ಓದಿಸಿ ತಿಳಿಯುತ್ತಿದ್ದರು. ಮೆರವಣಿಗೆಯಲ್ಲಿ ಭಾಗಹಿಸುವವರನ್ನು, ಚಳುವಳಿಯಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ತೊಡಗಿದವರನ್ನು ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸುತ್ತಿದ್ದರು. ಬಂಧನಕ್ಕೆ ಗುರಿಯಾಗಲು ಯಾರೂ ಅಂಜುತ್ತಿರಲಿಲ್ಲ. ಜೈಲಿನ ಸ್ಥಿತಿಗತಿಗಳು ಶೋಚನೀಯವಾಗಿದ್ದು, ಕಿಕ್ಕಿರಿದು ತುಂಬಿದ್ದವು. ಜೈಲಿನಿಂದ ಬಿಡುಗಡೆಯಾಗುವ ಹೊತ್ತಿಗೆ ಅನೇಕರು ರೋಗಗಳಿಗೆ ತುತ್ತಾಗಿರುತ್ತಿದ್ದರು. ಇದು ಹೋರಾಟಗಾರರ ಉತ್ಸಾಹವನ್ನು ಕುಗ್ಗಿಸಲಿಲ್ಲ. ಜೈಲಿನಲ್ಲಿ ಸತ್ಯಾಗ್ರಹಿಗಳಿಗೆ ಕೊಡುತ್ತಿದ್ದ ಶಿಕ್ಷೆಯೆಂದರೆ ಪ್ರತಿಯೊಬ್ಬರೂ ತಮಗೆ ನಿಗದಿಪಡಿಸಿದಷ್ಟು ರಾಗಿಯನ್ನು ಬೀಸಿ ಹಿಟ್ಟು ಮಾಡಬೇಕಿತ್ತು. ಒನಕೆಯಿಂದ ಭತ್ತವನ್ನು ಕುಟ್ಟಿ ಅಕ್ಕಿಯನ್ನು ಬೇರ್ಪಡಿಸಬೇಕಿತ್ತು. ರಾಗಿಕಲ್ಲಿನ ಕೊಠಡಿಯಲ್ಲಿ ಸತ್ಯಾಗ್ರಹಿಗಳನ್ನು ಕೂಡಿಹಾಕಲಾಗುತ್ತಿತ್ತು. ತಮ್ಮ ಪಾಲಿನ ರಾಗಿಯನ್ನು ಬೀಸಿದ ನಂತರವೇ ಅವರಿಗೆ ಮುದ್ದೆ, ರೊಟ್ಟಿಯನ್ನು ಕೊಡುತ್ತಿದ್ದರು. ಸಾರಾಯಿಯನ್ನು ಕದ್ದು ಮಾರಾಟ ಮಾಡುತ್ತಿದ್ದ ಆಪಾದನೆಯ ಮೇಲೆ ಜೈಲಿಗೆ ಬಂದ ಕೊರಮರ ಹೆಂಗಸರು ಸತ್ಯಾಗ್ರಹಿಗಳಿಗೆ ರಾಗಿ ಬೀಸಲು ನೆರವು ನೀಡುತ್ತಿದ್ದರು. ರಾಗಿಕಲ್ಲಿಗೆ ಅಗತ್ಯಕ್ಕಿಂತ ಹೆಚ್ಚಿನ ರಾಗಿಯನ್ನು ತುಂಬಿ ಮೇಲಿನ ಕಲ್ಲನ್ನು ಒಮ್ಮೆ ಎತ್ತಿ ಬೀಸಿದರೆ ರಾಗಿ ಹಿಟ್ಟಾಗುವ ಬದಲು ತರಿತರಿಯಾಗಿ ಉದುರುತ್ತಿತ್ತು. ಹೆಚ್ಚಿನ ಶ್ರಮ ತಪ್ಪಿಸಿಕೊಳ್ಳಲು ಕೊರಮರ ಹೆಂಗಸರು ಹೇಳಿಕೊಟ್ಟ ಉಪಾಯ ಇದಾಗಿತ್ತು. ಬೇಗ ರಾಗಿಯನ್ನು ಬೀಸಿ ಮುಗಿಸುತ್ತಿದ್ದರು. ಆದರೆ ರಾಗಿ ಸರಿಯಾಗಿ ಹಿಟ್ಟಾಗುತ್ತಿಲ್ಲವೆಂಬುದನ್ನು ಗಮನಿಸಿದ ಜೈಲಿನ ಅಧಿಕಾರಿಗಳು ಬಂದು ಕಲ್ಲುಗಳನ್ನು ಪರಿಶೀಲಿಸಿದರು. ಬಹುಶಃ ಬೀಸುವ ಕಲ್ಲಿನಲ್ಲಿ ದೋಷವಿರಬೇಕೆಂದು ಸುಮ್ಮನಾದರು. ಕೆಲವರು ಬೀಸುವ ಕಲ್ಲುಗಳನ್ನು, ಒನಕೆಗಳನ್ನು ಒಡೆದುಹಾಕುತ್ತಿದ್ದರು, ಚಳುವಳಿಯು ವ್ಯಾಪಕವಾಗಿ ಹರಡಿದಂತೆ ಬಂಧಿತರ ಸಂಖ್ಯೆಯೂ ಹೆಚ್ಚಾಗಿ ಜೈಲುಗಳು ಕಿಕ್ಕಿರಿದು ತುಂಬಿದವು. ಯಾವ ಖೈದಿಗಳನ್ನೂ ಒಂದೇ ಜೈಲಿನಲ್ಲಿ ಹೆಚ್ಚು ದಿವಸ ಉಳಿಸಿಕೊಳ್ಳುತ್ತಿರಲಿಲ್ಲ. ಗುಂಪು

ಕಟ್ಟಿಕೊಂಡು ಜೈಲಿನಲ್ಲಿ ಪ್ರತಿಭಟನೆ ಮಾಡಬಹುದೆಂದು ಮೈಸೂರು, ಶ್ರೀರಂಗಪಟ್ಟಣ, ಬೆಂಗಳೂರು, ಚಿಕ್ಕಮಗಳೂರು ಹೀಗೆ ಬೇರೆ ಬೇರೆ ಜೈಲುಗಳಿಗೆ ಬದಲಾಯಿಸುತ್ತಿದ್ದರು.

ಜೈಲಿನಲ್ಲಿ ರಾತ್ರಿ ಊಟ ಮಾಡಿ ಮಲಗಿಕೊಂಡ ಖೈದಿಗಳು ಬೆಳಗ್ಗೆ ಏಳುವ ಹೊತ್ತಿಗೆ ನಾಪತ್ತೆಯಾಗಿಬಿಡುತ್ತಿದ್ದರು. ಸಹಖೈದಿಗಳಿಗೆ ಇದೊಂದು ಸೋಜಿಗವಾಗಿತ್ತು. ದಿನೇ ದಿನೇ ಜೈಲಿನಲ್ಲಿ ಹೆಚ್ಚುತ್ತಿದ್ದ ಖೈದಿಗಳಿಗೆ ಜಾಗ ಒದಗಿಸಲಾಗದೆ ಜೈಲಿನ ಅಧಿಕಾರಿಗಳು ಕಂಡುಕೊಂಡಿದ್ದ ತಂತ್ರ ಇದಾಗಿತ್ತು. ರಾತ್ರೋರಾತ್ರಿ ಖೈದಿಗಳನ್ನು ವ್ಯಾನಿನಲ್ಲಿ ತುಂಬಿಕೊಂಡು ನೀಲಗಿರಿ,ಬಂಡೀಪುರ ಮೊದಲಾದ ದಟ್ಟಕಾಡುಗಳಲ್ಲಿ ಇಳಿಸಿ ಬಂದುಬಿಡುತ್ತಿದ್ದರು. ಬಂಧಿತರನ್ನು ಕರೆತರುವಾಗ ಮಾರ್ಗಮಧ್ಯದಲ್ಲಿ ಅರಣ್ಯಗಳಿದ್ದರೆ ಅಲ್ಲಿ ಇಳಿಸಿಬಿಡುತ್ತಿದ್ದರು. ದಟ್ಟವಾದ ಕಾಡಿನಲ್ಲಿ ನಾಲ್ಕೈದು ಮೈಲಿ ನಡೆದು ಊರನ್ನು ಸೇರಬೇಕಾಗಿತ್ತು. ಕೆಲವರು ವನ್ಯಮೃಗಗಳ ಪಾಲಾದರು. ಈ ಕುರಿತು ಜೈಲಿನಲ್ಲಿ ಚಳುವಳಿ ನಡೆಯಿತು.

ಪೊಲೀಸರಿಂದ ಬಂಧಿಸಲ್ಪಟ್ಟವರು ಸತ್ಯಾಗ್ರಹಿಗಳಾದರೂ ಕೂಡ ಜೈಲಿನ ಅಧಿಕಾರಿಗಳು ಅವರನ್ನು ಕಳ್ಳರಂತೆ ನಡೆಸಿಕೊಳ್ಳುತ್ತಿದ್ದರು. ಅವರ ಬಗ್ಗೆ ಕನಿಷ್ಠ ಕಾಳಜಿಯನ್ನೂ ತೋರುತ್ತಿರಲಿಲ್ಲ. ಮಣ್ಣಿನ ಮುಚ್ಚಳವೇ ಊಟದ ತಟ್ಟೆಯಾಗಿತ್ತು. ರಾಗಿಮುದ್ದೆ, ರುಚಿ ಶುಚಿಯಿಲ್ಲದ ಸಾರು, ಹೊದ್ದುಕೊಳ್ಳಲು ಒರಟಾದ ಕಂಬಳಿ ಕೊಡುತ್ತಿದ್ದರು. ಗುಂಡಿಯಲ್ಲಿಟ್ಟಿದ್ದ ಮಡಕೆಯಲ್ಲಿಯೇ ಮಲವಿಸರ್ಜನೆ ಮಾಡಿ ತಮ್ಮ ಮಲವನ್ನು ತಾವೇ ಎತ್ತಿಹಾಕಬೇಕಿತ್ತು. ಜೈಲಿನಲ್ಲಿ ಎಷ್ಟೋ ಜನ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದರು. ಈ ದುರವಸ್ಥೆಗಳನ್ನು ಸಹಿಸದೇ ಸತ್ಯಾಗ್ರಹಿಗಳು ಪ್ರತಿಭಟಿಸಿ ನಿರಶನವನ್ನು ಕೈಗೊಂಡರು. ಜೈಲಿನಲ್ಲಿ ಸತ್ಯಾಗ್ರಹಿಗಳು ಅನುಭವಿಸುತ್ತಿದ್ದ ತೊಂದರೆಗಳನ್ನು ಮನಗಂಡು ಹೆಚ್.ಸಿ. ದಾಸಪ್ಪನವರು ವಾರ್ಧಾಗೆ ಹೋಗಿ ಮಹಾತ್ಮ ಗಾಂಧೀಜಿಯವರನ್ನು ಭೇಟಿಯಾಗಿ ಅವರ ಗಮನಕ್ಕೆ ತಂದರು. ಆಗ ಗಾಂಧೀಜಿಯವರು ತಮ್ಮ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿಯವರನ್ನು ತಮ್ಮ ಪರವಾಗಿ ಮೈಸೂರಿಗೆ ಕಳುಹಿಸಿದರು. ಜೈಲಿನಲ್ಲಿ ಸತ್ಯಾಗ್ರಹಿಗಳು ಅನುಭವಿಸುತ್ತಿದ್ದ ತೊಂದರೆಗಳನ್ನು ಕಣ್ಣಾರೆ ಕಂಡ ದೇಸಾಯಿಯವರು ಆಗ ದಿವಾನರಾಗಿದ್ದ ಮಿರ್ಜಾ ಸಾಹೇಬರನ್ನು ಸಂಪರ್ಕಿಸಿ ಸತ್ಯಾಗ್ರಹಿಗಳನ್ನು ಗೌರವಯುತವಾಗಿ ನಡೆಸಿಕೊಳ್ಳುವಂತೆ ಹಾಗೂ ಅವರಿಗೆ



ಸರಿಯಾದ ಅನುಕೂಲವನ್ನು ಕಲ್ಪಿಸಿಕೊಡುವಂತೆ ಆಗ್ರಹಿಸಿದರು. ಪರಿಣಾಮವಾಗಿ ಮಣ್ಣಿನ ಮುಚ್ಚಳದ ಬದಲು ಸ್ಟೀಲಿನ ತಟ್ಟೆ, ಹರಕು ಕಂಬಳಿಗೆ ಬದಲಾಗಿ ರಗ್ಗುಗಳು, ಗೊಡ್ಡು ಸಾರಿನ ಬದಲು ತರಕಾರಿ ಹಾಕಿದ ರುಚಿಯಾದ ಸಾರು ಬಂದವು.

ಬಿ. ದೊಡ್ಡೇಗೌಡರು, ಹಾಲಹಳ್ಳಿಯ ಶ್ರೀಕಂಠಶೆಟ್ಟರು, ಎ.ಬೋರಯ್ಯ, ಬರಗಿಯ ನಾಗಮಲ್ಲಪ್ಪ ಈ ಚಳುವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ತಾಲ್ಲೂಕಿನ ಅನೇಕರು ಜೈಲುವಾಸ ಅನುಭವಿಸಿದರು. ೧೯೪೭ ಆಗಸ್ಟ್ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ತಾಲ್ಲೂಕಿನಾದ್ಯಂತ ಸಂಭ್ರಮಾಚರಣೆ ನಡೆಯಿತು. ಚಿಕ್ಕಕಾಟಿ ಗ್ರಾಮದಲ್ಲಿ ಹಬ್ಬದ ವಾತಾವರಣ ಇತ್ತು. ಪರಸ್ಪರ ಸಿಹಿ ಹಂಚಿ ಸ್ವಾತಂತ್ರ್ಯ ಬಂದ ದಿನವನ್ನು ಹಬ್ಬದಂತೆ ಆಚರಿಸಿದರು. ತಾಲ್ಲೂಕಿನ ಎಲ್ಲಾ ಗ್ರಾಮಗಳಲ್ಲಿಯೂ ಇಂತದ್ದೇ ಸಂಭ್ರಮದ ವಾತಾವರಣವಿತ್ತು.

ಭಾರತಕ್ಕೆ ಸ್ವಾತಂತ್ರ್ಯ ಬಂದಿತಾದರೂ ಮೈಸೂರಿಗೆ ಸ್ವಾತಂತ್ರ್ಯ ಬಂದಿರಲಿಲ್ಲ. ಬ್ರಿಟಿಷರ ನಿರ್ಗಮನದ ನಂತರ ಮೈಸೂರಿನ ದೊರೆಗಳು ಅಧಿಕಾರ ಹಸ್ತಾಂತರಿಸುವಲ್ಲಿ ವಿಳಂಬ ನೀತಿ ಅನುಸರಿಸಿದರು. ಆಗ ಜವಾಬ್ದಾರಿ ಸರ್ಕಾರಕ್ಕಾಗಿ ಮತ್ತೊಮ್ಮೆ ಹೋರಾಟ ನಡೆಸಬೇಕಾಯಿತು. ರಾಜ್ಯಾದ್ಯಂತ ಸಂಘಟಿತರಾಗಿ ಕೆ.ಸಿ.ರೆಡ್ಡಿ, ಕೆ. ಹನುಮಂತಯ್ಯ ಮೊದಲಾದವರ ನೇತೃತ್ವದಲ್ಲಿ ಅರಮನೆಯ ಮುಂದೆ ಚಳುವಳಿ ನಡೆಸಲು ನಿರ್ಧರಿಸಿದರು. ಅರಮನೆ ಸತ್ಯಾಗ್ರಹವು ೪೨ ದಿನಗಳ ಕಾಲ ನಡೆಯಿತು. ಇದಕ್ಕೆ ಇತರೆ ರಾಜ್ಯಗಳು ಬೆಂಬಲ ಸೂಚಿಸಿದವು. ಸ್ವಯಂ ಸ್ಫೂರ್ತಿಯಿಂದ ಸಾವಿರಾರು ಜನ ಈ ಚಳುವಳಿಯಲ್ಲಿ ಭಾಗವಹಿಸಿದರು. ಮಹಾರಾಜರ ಆಪ್ತ ಕಾರ್ಯದರ್ಶಿಗಳಾಗಿದ್ದ ತಂಬೂಚೆಟ್ಟಿಯವರ ಆಜ್ಞೆಯಂತೆ ಜನನಾಯಕರನ್ನು ಬಂಧಿಸಲಾಯಿತು. ಇದರಿಂದ ಕುಪಿತರಾದ ಜನ ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಹಾಗೂ ತಂಬುಚೆಟ್ಟಿಯವರ ವಿರುದ್ಧ 'ಆರ್ಕಾಟ್ ಬಾಯ್ಕಾಟ್, ತಂಬುಚೆಟ್ಟಿ ಚಟ್ಟಕಟ್ಟಿ, ಕೆ.ಸಿ.ರೆಡ್ಡಿ ಪಟ್ಟಕಟ್ಟಿ' ಎಂಬ ಘೋಷಣೆಗಳನ್ನು ಕೂಗಿದರು. ಲೆಕ್ಕವಿಲ್ಲದಷ್ಟು ಲಾಠಿಯೇಟು, ಗೋಲಿಬಾರ್, ಬಂಧನಗಳು ನಡೆದವು. ಆದರೆ ಜನರ ಆಶಯವನ್ನು ಹತ್ತಿಕ್ಕುವುದು ಅಸಾಧ್ಯವಾಗಿತ್ತು. ಗುಂಡ್ಲುಪೇಟೆಯಲ್ಲಿ 'ಮೈಸೂರು ಚಲೋ' ಹೋರಾಟ ಕಾಳ್ಗಿಚ್ಚಿನಂತೆ ಹರಡಿತು. ನೂರಾರು ಜನ ಚಳುವಳಿಯಲ್ಲಿ

ಭಾಗವಹಿಸಿದರು. ಅನೇಕರನ್ನು ಬಂಧಿಸಿ ಜೈಲಿಗಟ್ಟಿದರು. ಚಳುವಳಿಯನ್ನು ಹತ್ತಿಕ್ಕುವಲ್ಲಿ ವಿಫಲವಾದ ಸರ್ಕಾರ ೦೬.೧೦.೧೯೪೭ ರಂದು ಬಂಧಿತರನ್ನೆಲ್ಲಾ ಬಿಡುಗಡೆ ಮಾಡಿತು. ೧೧.೧೦.೧೯೪೭ ರಂದು ಮೈಸೂರು ಸರ್ಕಾರಕ್ಕೂ ಕಾಂಗ್ರೆಸ್ಸಿಗೂ ಒಪ್ಪಂದವಾಗಿ ಅದರಂತೆ ೧೩.೧೦.೨೦೨೧ ರಂದು 'ಪ್ರಜಾಪ್ರತಿನಿಧಿಗಳ ಮಂತ್ರಿಮಂಡಲ ಸ್ಥಾಪನೆಯಾಗಿದೆ' ಎಂದು ಘೋಷಿಸಲಾಯಿತು. ೨೪.೧೦.೧೯೪೭ ರಂದು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ಹೀಗೆ ಗುಂಡ್ಲುಪೇಟೆಯ ಸ್ವಾತಂತ್ರ್ಯ ಹೋರಾಟವು ಕಾಂಗ್ರೆಸ್ ಸರ್ಕಾರ ಸ್ಥಾಪನೆಯಾಗುವುದರೊಂದಿಗೆ ಮುಕ್ತಾಯಗೊಂಡಿತು. ಚಳುವಳಿಗಳಲ್ಲಿ ತೊಡಗಿಸಿಕೊಂಡಿದ್ದವರು ಕೆಲವರು ಸಾರ್ವಜನಿಕ ಬದುಕಿಗೆ ತೆರೆದುಕೊಂಡರು. ಉಳಿದವರು ಎಂದಿನಂತೆ ತಮ್ಮ ವೃತ್ತಿಗಳಲ್ಲಿ ತೊಡಗಿಸಿಕೊಂಡರು. ಕೊನೆಯವರೆಗೂ ಮಹಾತ್ಮ ಗಾಂಧೀಜಿಯವರ ತತ್ವಗಳನ್ನು ಪಾಲಿಸಿದರು. ಸರಳ ಹಾಗೂ ಸಾತ್ವಿಕ ಜೀವನ ನಡೆಸುವುದು, ಚರಕದಿಂದ ನೂಲು ತೆಗೆಯುವುದು, ಖಾದಿಯ ಬಳಕೆ ಹೀಗೆ ಹೋರಾಟದ ಸಮಯದಲ್ಲಿ ಮೈಗೂಡಿಸಿಕೊಂಡಿದ್ದ ಆದರ್ಶಗಳನ್ನು ಬದುಕಿನುದ್ದಕ್ಕೂ ಪಾಲಿಸಿದರು. ಇದರಲ್ಲಿ ಕೆಲವು ಹೋರಾಟಗಾರರ ವಿವರಗಳನ್ನು ಇಲ್ಲಿ ಹಂಚಿಕೊಳ್ಳಲಾಗಿದೆ.

## ಬಿ. ದೊಡ್ಡೇಗೌಡ



ಗುಂಡ್ಲುಪೇಟೆಯ ಕುರುಬ ಸಮುದಾಯದ ಮುಖಂಡರಾಗಿದ್ದ ಬಡಪ್ಪನವರ ಪುತ್ರರಾಗಿ ದೊಡ್ಡೇಗೌಡರು ಜನಿಸಿದರು. ಗುಂಡ್ಲುಪೇಟೆಯಲ್ಲಿ ಕಾಂಗ್ರೆಸ್‌ನ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಗುಂಡ್ಲುಪೇಟೆಯ ಯುವಜನತೆಯನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸೆಳೆದರು. ಕುರುಬಗೇರಿಯಲ್ಲಿರುವ ಇವರ ಮನೆ ತಾಲ್ಲೂಕಿನಾದ್ಯಂತ ಕಾಂಗ್ರೆಸ್‌ನ ಕಾರ್ಯಚಟುವಟಿಕೆಗಳನ್ನು ಯೋಜಿಸುವ ಸ್ಥಳವಾಗಿತ್ತು. ಮೈಸೂರು ಪ್ರಾಂತ್ಯ ಕಾಂಗ್ರೆಸ್‌ನ ಪ್ರಮುಖರು ಹಾಗೂ ಚಳುವಳಿಯ ಮುಂಚೂಣಿ ನಾಯಕರೂ ಆಗಿದ್ದ ಸಾಹುಕಾರ್ ಚೆನ್ನಯ್ಯನವರು, ಟಿ. ಮರಿಯಪ್ಪನವರು ಇವರ ಮನೆಗೆ ಭೇಟಿ ನೀಡಿ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ತಗಡೂರು ರಾಮಚಂದ್ರರಾಯರು ಹೊಸೂರಿನ ಹುಣಸೆತೋಪಿನಲ್ಲಿ ಸ್ವಾತಂತ್ರ್ಯದ ಮಹತ್ವ ಕುರಿತು ಜನರನ್ನು ಉದ್ದೇಶಿಸಿ ಭಾಷಣ ಮಾಡಿದರು. ೧೯೪೨ ರ ಕ್ವಿಟ್ ಇಂಡಿಯಾ ಚಳುವಳಿಯು ಗುಂಡ್ಲುಪೇಟೆಯಲ್ಲಿ ಬಿ.ದೊಡ್ಡೇಗೌಡರ ನೇತೃತ್ವದಲ್ಲಿ ನಡೆಯಿತು. ಪೊಲೀಸರು ಇವರನ್ನು ಬಂಧಿಸಿ ಮೈಸೂರು ಜೈಲಿಗೆ ಕಳುಹಿಸಿದರು. ಜೈಲಿನಿಂದ ಬಿಡುಗಡೆಯಾಗಿ ಬಂದ ನಂತರ ತೀವ್ರ ಅನಾರೋಗ್ಯಕ್ಕೆ ತುತ್ತಾದ ಗೌಡರು ಬದುಕಿ ಉಳಿದದ್ದೇ ಹೆಚ್ಚು. ಇಷ್ಟಾದರೂ ದೇಶಸೇವೆ ಮಾಡಬೇಕೆಂಬ ತುಡಿತ ಕೊಂಚವೂ ಕಡಿಮೆಯಾಗಲಿಲ್ಲ, ಸ್ವಾತಂತ್ರ್ಯದ ಕಾವು ಏರುತ್ತಿತ್ತು. ಆಗ ಪೊಲೀಸರಿಂದ ಬಂಧಿತರಾಗುವುದನ್ನು ತಪ್ಪಿಸಿಕೊಳ್ಳಲು ಅನೇಕರು ಭೂಗತರಾಗುತ್ತಿದ್ದರು. ಅಂತಹವರಿಗೆ ಗೌಡರ ಮನೆ ಆಶ್ರಯ ತಾಣವಾಗಿತ್ತು. ಪೊಲೀಸರ ದಸ್ತಗಿರಿ ಹಾಗೂ ಜೈಲು ಶಿಕ್ಷೆಗಳಿಗೆ ಹೆದರದೆ ಚಳುವಳಿಗಾರರಿಗೆ ಆಶ್ರಯ ನೀಡುವುದು ಒಂದು ಸಾಹಸವೇ ಆಗಿತ್ತು. ತಾಲ್ಲೂಕಿನಲ್ಲಿ ಕಾಂಗ್ರೆಸ್ ಪ್ರಾರಂಭವಾಗುವುದರಲ್ಲಿ ಮತ್ತು ಬೆಳೆಯುವುದರಲ್ಲಿ ದೊಡ್ಡೇಗೌಡರ ಪಾತ್ರ ಬಹುಮುಖ್ಯವಾದುದು. ಇವರಿಂದ ಸ್ಫೂರ್ತಿ ಪಡೆದು ಯುವಕರು ಚಳುವಳಿಯಲ್ಲಿ ಭಾಗವಹಿಸಿದರು. ಭಾರತವು ಸ್ವಾತಂತ್ರ್ಯ ಗಳಿಸಿದ ಮೇಲೆ ಮೈಸೂರು ಪ್ರಾಂತ್ಯದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ 'ಮೈಸೂರು ಚಲೋ' ಚಳುವಳಿ ಗುಂಡ್ಲುಪೇಟೆಯಲ್ಲಿ ವ್ಯಾಪಕವಾಗಿ ನಡೆಯಿತು. ಅನೇಕರು ಬಂಧನಕ್ಕೊಳಗಾದರು. ಮೈಸೂರು, ನಂಜನಗೂಡು ಬಂದೀಖಾನೆಗಳು ಕಿಕ್ಕಿರಿದು ತುಂಬಿದ್ದವು. ಸ್ವಾತಂತ್ರ್ಯ ಬಂದ ನಂತರ ಗೌಡರು ಸಾರ್ವಜನಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತಾಲ್ಲೂಕಿನ ಸಹಕಾರಿ ಬ್ಯಾಂಕುಗಳಾದ ಪಿ.ಎಲ್.ಡಿ. ಬ್ಯಾಂಕ್ ಹಾಗೂ ಎಂಡಿಸಿಸಿ ಬ್ಯಾಂಕುಗಳು ಇವರ ನೇತೃತ್ವದಲ್ಲಿ ಪ್ರಾರಂಭವಾದವು. ಸಹಕಾರ ಕ್ಷೇತ್ರದಲ್ಲಿಯೂ ಇವರು ಸೇವೆ ಸಲ್ಲಿಸಿದ್ದಾರೆ. ಇಂದಿಗೂ ದೊಡ್ಡೇಗೌಡರ ನಿವಾಸದಲ್ಲಿ ಭಾರತಮಾತೆ, ಗಾಂಧೀಜಿ, ನೆಹರು ಹಾಗೂ ಸುಭಾಷ್ ಚಂದ್ರ ಬೋಸ್‌ರವರ

ಚಿತ್ರಪಟಗಳಿಗೆ ಪೂಜೆ ಸಲ್ಲುತ್ತಿದೆ. ದೊಡ್ಡೇಗೌಡರು ಮರೆಯಾದರೂ ಅವರು ರೂಢಿಸಿಕೊಂಡು ಬಂದಿದ್ದ ಆದರ್ಶಗಳು ಸದಾ ಜೀವಂತವಾಗಿವೆ. ಮುಂದಿನ ಪೀಳಿಗೆಗೆ ಇವರ ಹೋರಾಟದ ಬದುಕು ಆದರ್ಶಪ್ರಾಯವಾಗಿದೆ.

## ಜಿ.ಬಿ ಚಿಕ್ಕಣ್ಣ



ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯವರಾದ ಜಿ.ಬಿ.ಚಿಕ್ಕಣ್ಣನವರು ಶ್ರೀ ಮೊಳ್ಳೇಗೌಡ ಮತ್ತು ಶ್ರೀಮತಿ ಮಾಲಮ್ಮನವರ ಕಿರಿಯ ಪುತ್ರ. ಆರನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದರಾದರೂ ದಿನನಿತ್ಯ 'ತಾಯಿನಾಡು' ಪತ್ರಿಕೆಯನ್ನು ಓದುವ ಹವ್ಯಾಸವಿಟ್ಟುಕೊಂಡಿದ್ದರು. ಆದರ್ಶ ಪತ್ರಿಕಾ ತತ್ವಗಳನ್ನು ಪಾಲಿಸಿಕೊಂಡು ಬಂದಿದ್ದ ತಾಯಿನಾಡು ಪತ್ರಿಕೆಯು 'ಮೈಸೂರಿನ ಹಿಂದೂ' ಎಂಬ ಖ್ಯಾತಿಯನ್ನು ಪಡೆದಿತ್ತು. ಪತ್ರಿಕೆಯಲ್ಲಿ ಬರುತ್ತಿದ್ದ ಲೇಖನಗಳನ್ನು, ಅಂಕಣಗಳನ್ನು ತಪ್ಪದೇ ಓದುತ್ತಿದ್ದ ಚಿಕ್ಕಣ್ಣನವರಿಗೆ ತಾನೂ ದೇಶಕ್ಕಾಗಿ ಸೇವೆ ಸಲ್ಲಿಸಬೇಕೆಂಬ ಮನೋಭಾವ ಬೆಳೆಯಿತು. ಮನೆಯ ಕಡೆಗೆ ಹೆಚ್ಚಿನ ಗಮನ ಹರಿಸುತ್ತಿಲ್ಲವೆಂದು ಕುಟುಂಬದವರು ನಿಂದಿಸಿದರೂ ಅದನ್ನು ಗಂಭೀರವಾಗಿ ಪರಿಗಣಿಸದೆ ಚಳುವಳಿಯಲ್ಲಿ ಭಾಗವಹಿಸತೊಡಗಿದರು.ಮಹಾತ್ಮ ಗಾಂಧೀಜಿಯೆಂದರೆ ಚಿಕ್ಕಣ್ಣನವರಿಗೆ ಅಪಾರ ಗೌರವ, ಅಪರಿಮಿತವಾದ ಭಕ್ತಿ. ಒಮ್ಮೆ ಗಾಂಧೀಜಿಯವರು ರೈಲಿನಲ್ಲಿ ಮೈಸೂರಿಗೆ ಬರುತ್ತಿರುವರೆಂದು ತಿಳಿದು ಕಾಲ್ನಡಿಗೆಯಲ್ಲಿ ಹೋಗಿ ಮಹಾತ್ಮರ ದರ್ಶನ ಮಾಡಿದರು. ಮೈಸೂರು, ಚಾಮರಾಜನಗರ, ನಂಜನಗೂಡು, ಗುಂಡ್ಲುಪೇಟೆ ಭಾಗದಲ್ಲಿ ಸ್ವಾತಂತ್ರ್ಯ ಹೋರಾಟದ ಮುಂದಾಳತ್ವವನ್ನು ತಗಡೂರು ರಾಮಚಂದ್ರರಾಯರು, ಎಂ.ಎನ್. ಜೋಯಿಸ್ ಮೊದಲಾದವರು ವಹಿಸಿಕೊಂಡಿದ್ದರು. ಗುಂಡ್ಲುಪೇಟೆಯ ಹುಣಸೆತೋಪಿನಲ್ಲಿ ಒಮ್ಮೆ ತಗಡೂರು ರಾಮಚಂದ್ರರಾಯರು ಹಾಗೂ



ಎಂ.ಎನ್. ಜೋಯಿಸರು ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮಾತನಾಡಿದರು. ಇದರಿಂದ ಸ್ಫೂರ್ತಿ ಪಡೆದು ಸ್ವಾತಂತ್ರ್ಯ ಚಳುವಳಿ ಹಾಗೂ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದರು. ಮೈಸೂರು ಚಲೋ ಚಳುವಳಿ ಸಮಯದಲ್ಲಿ ತಮ್ಮ ಊರಿನ ಸೇಂದಿ ಅಂಗಡಿಗೆ ಬೆಂಕಿಯನ್ನು ಹಚ್ಚಿದರು. ಪೋಲೀಸರು ಇವರನ್ನು ಬಂಧಿಸಿ ಕರೆದೊಯ್ದರು. ಮೈಸೂರು ಜೈಲಿನಲ್ಲಿ ೧೯ ದಿನಗಳ ಕಾಲ ಸೆರೆವಾಸವನ್ನು ಅನುಭವಿಸಿದರು. ಹೆಚ್. ಸಿ. ದಾಸಪ್ಪನವರ ನೇತೃತ್ವದಲ್ಲಿ ಇನ್ನು ಮುಂದೆ ವಿದೇಶಿ ವಸ್ತ್ರಗಳನ್ನು ಬಳಸುವುದಿಲ್ಲವೆಂದು, ಸ್ವದೇಶಿ ವಸ್ತ್ರಗಳನ್ನು ಮಾತ್ರ ಬಳಸುವುದಾಗಿ ಪ್ರತಿಜ್ಞೆ ಮಾಡಿದರು. ತಮ್ಮ ಬದುಕಿನ ಕೊನೆಯವರೆಗೂ ಹಾಗೇ ನಡೆದುಕೊಂಡರು. ಸ್ವಾತಂತ್ರ್ಯಾನಂತರ ಗುಂಡ್ಲುಪೇಟೆ ತಾಲ್ಲೂಕು ಕಾಂಗ್ರೆಸ್‌ನ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದರು. ಅಲ್ಲದೇ ಪುರಸಭೆ ಹಾಗೂ ವ್ಯವಸಾಯೋತ್ಪನ್ನ ಮಾರುಕಟ್ಟೆ, ನಂಜನಗೂಡು ಇಲ್ಲಿ ಸೇವೆ ಸಲ್ಲಿಸಿದ್ದಾರೆ. ಭಾರತವು ಬ್ರಿಟಿಷರ ಕಪಿಮುಷ್ಠಿಯಿಂದ ಮುಕ್ತವಾಗಿ, ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಬಂದ ಮೇಲೆ ತಮ್ಮ ಮುಂದಿನ ಜೀವನವನ್ನು ಕೃಷಿಕರಾಗಿ ಕಳೆದರು. ಜೀವನದುದ್ದಕ್ಕೂ ತಮಗೆ ದಾರಿದೀಪವಾಗಿದ್ದ ಮಹಾತ್ಮ ಗಾಂಧಿಯವರ ತತ್ವಗಳನ್ನು ಚಾಚೂ ತಪ್ಪದೇ ಪಾಲಿಸಿದರು. ಕಟ್ಟಾ ಗಾಂಧಿವಾದಿಯಾಗಿ ಬಾಳುವೆ ನಡೆಸಿದರು. ಗುಂಡ್ಲುಪೇಟೆಯ ಸ್ವಾತಂತ್ರ್ಯ ಹೋರಾಟವನ್ನು ಗಮನಿಸಿದರೆ ಇತಿಹಾಸದಲ್ಲಿ ದಾಖಲಾದಂತಹ ಮಹಾನ್ ನಾಯಕರು ಕಂಡುಬರುವುದಿಲ್ಲ. ತಾಯ್ನಾಡಿಗಾಗಿ ಪ್ರಾಣವನ್ನು ಅರ್ಪಿಸಲು ಸಿದ್ಧರಿದ್ದಂತಹ ಸಾಮಾನ್ಯ ಜನರು ಕಿಚ್ಚಿನಿಂದ ಹೋರಾಡಿದರು. ಇಂತಹವರಲ್ಲಿ ಜಿ.ಬಿ.ಚಿಕ್ಕಣ್ಣನವರೂ ಒಬ್ಬರಾಗಿದ್ದರು.

## ಹೆಚ್.ಎನ್. ಶ್ರೀಕಂಠಶೆಟ್ಟರು




ಹಾಲಹಳ್ಳಿ ಶ್ರೀ ನಂಜುಂಡಶೆಟ್ಟರು ಮತ್ತು ಶ್ರೀಮತಿ ಬೋರಮ್ಮನವರ ಪುತ್ರರಾಗಿ ೦೩.೧೦.೧೯೨೧ ರಂದು ಜನಿಸಿದರು. ಒಂಬತ್ತು ವರ್ಷ ವಯಸ್ಸಿನವರಾಗಿದ್ದಾಗ ತಂದೆಯನ್ನು ಕಳೆದುಕೊಂಡು ತಾಯಿಯ ಪ್ರೀತಿಯ ನೆರಳಿನಲ್ಲಿ ಬೆಳೆದರು. ಯೌವನದ

ದಿನಗಳಲ್ಲಿ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಸ್ವಗ್ರಾಮದಲ್ಲಿದ್ದರು. ಇಡೀ ದೇಶವೇ ಗಾಂಧೀಜಿಯವರ ಕರೆಗೆ ಓಗೊಟ್ಟು ಕ್ವಿಟ್ ಇಂಡಿಯಾ ಚಳುವಳಿಗೆ ಧುಮುಕಿದ್ದ ಕಾಲ. ಬಿಸಿರಕ್ತದ ಯುವಕರಾಗಿದ್ದ ಶ್ರೀಕಂಠಶೆಟ್ಟರು ದೇಶಸೇವೆ ಮಾಡುವ ಸಂಕಲ್ಪತೊಟ್ಟು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ೧೯೩೪ ರಲ್ಲಿ ಗಾಂಧೀಜಿಯವರು ನಂಜನಗೂಡಿಗೆ ಭೇಟಿ ನೀಡಿದ್ದರು. ೧೨–೧೩ ವರ್ಷದ ಬಾಲಕರಾಗಿದ್ದ ಶೆಟ್ಟರಿಗೆ ಮಹಾತ್ಮರ ದರ್ಶನ ಸಾಧ್ಯವಾಗಿರಲಿಲ್ಲ. ಗಾಂಧೀಜಿಯವರನ್ನು ನೋಡಲು ಸಾಧ್ಯವಾಗದೆ ನಿರಾಸೆಗೊಂಡರೂ ಧೃತಿಗೆಡದೆ ಅವರ ಕರೆಗೆ ಓಗೊಟ್ಟು ಭಾರತಮಾತೆಯ ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಂಡರು. ೧೯೪೨ ರಲ್ಲಿ ನಡೆದ 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಲಕ್ಷಾಂತರ ಯುವಕರು ಮನೆಮಠ ತೊರೆದು ಚಳುವಳಿಯಲ್ಲಿ ಸೇರಿಹೋದ ಕಾಲವದು. ಅಂತಹ ಯುವಕರಲ್ಲಿ ಶ್ರೀಕಂಠಶೆಟ್ಟರು ಒಬ್ಬರಾಗಿದ್ದರರು. ಚಳುವಳಿಯನ್ನು ಹತ್ತಿಕ್ಕಲು ಬ್ರಿಟಿಷರು ಎಲ್ಲಾ ತಂತ್ರಗಳನ್ನು ಬಳಸಿದರು. ಭೂಗತರಾಗಿ ಕಾರ್ಯನಿರ್ವಹಿಸಿಬೇಕಾಗಿ ಬಂದಾಗ ಶ್ರೀಮಂತ ಕುಟುಂಬದಲ್ಲಿ ಜನಿಸಿದ ಅವರಿಗೆ ಕಷ್ಟವಾಯಿತಾದರೂ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಿಚ್ಚಿನ ಮುಂದೆ ಅದು ಗಣನೆಗೆ ಬರಲಿಲ್ಲ. ಈ ಪ್ರಾಂತ್ಯದಲ್ಲಿ ಹೋರಾಟದ ಮುಂದಾಳುಗಳಾಗಿದ್ದ ತಗಡೂರು ರಾಮಚಂದ್ರರಾವ್, ಎಂ.ಎನ್.ಜೋಯಿಸ್, ಹೆಚ್.ಸಿ.ದಾಸಪ್ಪ, ಸಾಹುಕಾರ್ ಚೆನ್ನಯ್ಯ, ತಗಡೂರಿನ ಸುಬ್ಬಣ್ಣ ಮುಂತಾದವರ ಜೊತೆಗೂಡಿ ಅವರ ದೇಶಾಭಿಮಾನ ಹರಳುಗಟ್ಟಿತು. ೧೯೪೩ ರಲ್ಲಿ ಕೃಷ್ಣರಾಜನಗರದ ನಂಜುಂಡಶೆಟ್ಟಿಯವರ ಪುತ್ರಿ ವೀರಮ್ಮನವರನ್ನು ವಿವಾಹವಾದರು. ಇದರೊಂದಿಗೆ ಇವರ ಕಾರ್ಯಕ್ಷೇತ್ರವು ಹಾಲಹಳ್ಳಿಯಿಂದ ಕೃಷ್ಣರಾಜನಗರದವರೆಗೂ ವಿಸ್ತಾರಗೊಂಡಿತು. ಭೂಗತರಾಗಿ ಪತ್ರಿಕೆಗಳಿಗೆ ಲೇಖನಗಳನ್ನು ಬರೆದರು. ಪತ್ರಿಕೆಗಳನ್ನು ಬೇರೆ ಬೇರೆ ಕಡೆಗೆ ಹಂಚಿದರು. ಹೀಗೆ ಸಕ್ರಿಯವಾಗಿ ತಮ್ಮನ್ನು ಹೋರಾಟದಲ್ಲಿ ತೊಡಗಿಸಿಕೊಂಡರು. ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಅನೇಕ ಪ್ರಮುಖರು ಸ್ವಾತಂತ್ರ್ಯ ಬಂದ ನಂತರ ಸಕ್ರಿಯ ರಾಜಕಾರಣಕ್ಕೆ ಪ್ರವೇಶಿಸಿದರು. ರಾಜಕಾರಣವು ಜನರ ಸೇವೆ ಮಾಡಲು ಒಂದು ಉತ್ತಮ ಮಾಧ್ಯಮ ಎಂದು ಭಾವಿಸಿದ್ದ ಕಾಲವದು. ತಮ್ಮ ರಾಜಕೀಯ ಬದುಕನ್ನು ಆರಂಭಿಸಿದ ಶ್ರೀಕಂಠಶೆಟ್ಟರು ಗುಂಡ್ಲುಪೇಟೆಯನ್ನು ಒಂದು ಮಾದರಿ ತಾಲ್ಲೂಕನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದರು.



ತಾಲ್ಲೂಕಿನ ಮೂಲೆ ಮೂಲೆಯೂ ಅವರಿಗೆ ಚಿರಪರಿಚಿತವಾಗಿತ್ತು. ಶಿಕ್ಷಣದ ಮಹತ್ವ ಅರಿತಿದ್ದ ಶ್ರೀಕಂಠಶೆಟ್ಟರು ತಾಲ್ಲೂಕಿಗೆ ಅನೇಕ ಶಾಲೆ ಕಾಲೇಜುಗಳು ಮಂಜೂರಾಗುವಲ್ಲಿ ಪ್ರಮುಖ ಪಾತ್ರವಹಿಸಿದರು. ೧೯೮೦ರಲ್ಲಿ ನರಗುಂದ ರೈತರ ಮೇಲೆ ಪೊಲೀಸರು ಗೋಲಿಬಾರ್ ನಡೆಸಿದ್ದನ್ನು ಪ್ರತಿಭಟಿಸಿ ರಾಜ್ಯದ ನಾನಾ ಭಾಗಗಳಿಂದ ಕಾಲುನಡಿಗೆ ಜಾಥಾ ನಡೆಯಿತು. ಆಗ ಮೈಸೂರಿನಿಂದ ಬೆಂಗಳೂರಿಗೆ ಹೊರಟ ರೈತರ ಜಾಥಾದಲ್ಲಿ ತಾಲ್ಲೂಕಿನ ಇತರ ಮುಖಂಡರೊಂದಿಗೆ ಭಾಗವಹಿಸಿದ್ದರು. ನ್ಯಾಯಕ್ಕಾಗಿ ನಡೆಯುವ ಹೋರಾಟಗಳಲ್ಲಿ, ತಾಲ್ಲೂಕಿನ ರೈತರ ಹಿತಾಸಕ್ತಿಗಳನ್ನು ಕಾಯುವ ಸಮಯ ಬಂದಾಗಿ ಅದಕ್ಕಾಗಿ ಸದಾ ಮುಂಚೂಣಿಯಲ್ಲಿ ಇರುತ್ತಿದ್ದರು. ತಮ್ಮ ಜೀವನದುದ್ದಕ್ಕೂ ಆದರ್ಶಗಳಿಗಾಗಿ ಬದುಕಿದ ಶೆಟ್ಟರು ೦೨.೧೧.೧೯೯೯ ರಂದು ವಿಧಿವಶರಾದರು. ಸ್ವಾತಂತ್ರ್ಯ ಚಳುವಳಿಯ ಹೋರಾಟದ ಸಮಯದಲ್ಲಿ ಮೈಗೂಡಿಸಿಕೊಂಡಿದ್ದ ಮೌಲ್ಯಗಳನ್ನು ತಮ್ಮ ಬದುಕಿನುದ್ದಕ್ಕೂ ಕಾಪಿಟ್ಟುಕೊಂಡಿದ್ದ ಶ್ರೀಕಂಠಶೆಟ್ಟರು ಅದನ್ನು ತಮ್ಮ ಬದುಕಿಗೆ ದಾರಿ ದೀಪವಾಗಿಸಿಕೊಂಡರು. ಗ್ರಾಮಗಳ ಅಭಿವೃದ್ಧಿ, ಕೃಷಿ ಅಭಿವೃದ್ಧಿ, ನೀರಾವರಿಗೆ ಒತ್ತುಕೊಟ್ಟು ರೈತರ ಬದುಕನ್ನು ಹಸನುಗೊಳಿಸಿದರು. ಸರ್ವರಿಗೂ ಶಿಕ್ಷಣ ದೊರೆಯಬೇಕೆಂಬ ಮಹಾತ್ಮರ ಕನಸನ್ನು ನನಸಾಗಿಸಲು ಶ್ರಮಿಸಿದರು. ಶ್ರೀಕಂಠಶೆಟ್ಟರ ಬದುಕಿನಲ್ಲಿ ಮಹಾತ್ಮ ಗಾಂಧಿಯವರ ಪ್ರಭಾವ, ಪ್ರೇರಣೆ ಬಹಳ ಗಾಢವಾಗಿತ್ತು ಎಂಬುದಕ್ಕೆ ಅವರು ನಡೆದ ಹಾದಿ ಸಾಕ್ಷಿಯಾಗಿದೆ.

## 'ಲೋಕಸೇವಕ' ಬಸವನಾಯಕ



ಬಸವನಾಯಕರು ಕುಲಗಾಣದಲ್ಲಿ ಜನಿಸಿದರು. ತಂದೆ ಹನುಮಂತನಾಯಕ, ತಾಯಿ ಹೊನ್ನಮ್ಮನವರು. ಕುಲಗಾಣ ಹಾಗೂ ಕಬ್ಬಹಳ್ಳಿಯ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿ, ಹೈಸ್ಕೂಲ್ ಶಿಕ್ಷಣವನ್ನು ಪಡೆಯಲು ಮೈಸೂರಿನ ಡಿ. ಬನುಮಯ್ಯ ಶಾಲೆಗೆ ಪ್ರವೇಶ ಪಡೆದರು. ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದು ಒಂದು ಬಾಡಿಗೆ ಮನೆಯಲ್ಲಿ

ಸಾರ್ವಜನಿಕ ಹಾಸ್ಟೆಲ್ ನಡೆಸುತ್ತಿದ್ದರು. ಈ ಹಾಸ್ಟೆಲ್‌ನಲ್ಲಿ ಪ್ರವೇಶ ಪಡೆದ ಬಸವನಾಯಕರಿಗೆ ಟಿ.ಎಸ್. ಸುಬ್ಬಣ್ಣನವರೊಂದಿಗೆ ಒಡನಾಟ ಬೆಳೆಯಿತು. ಮೈಸೂರು ಕಾಂಗ್ರೆಸ್‌ನ ಪ್ರಮುಖ ನಾಯಕರಾಗಿದ್ದ ತಗಡೂರು ರಾಮಚಂದ್ರರಾಯರು, ಹೆಚ್.ಸಿ.ದಾಸಪ್ಪ, ಸೀತಾರಾಮ ಅಯ್ಯಂಗಾರ್, ಸುಬ್ಬರಾವ್ ಹಾಗೂ ಟಿ.ಎಸ್.ಸುಬ್ಬಣ್ಣನವರು ಗಾಂಧಿಯವರನ್ನು ಭೇಟಿ ಮಾಡಲು ಸೇವಾಗ್ರಾಮಕ್ಕೆ ಹೊರಟು ನಿಂತಾಗ ಶಾಲಾ ವಿದ್ಯಾರ್ಥಿಯಾಗಿದ್ದ ಬಸವನಾಯಕರು ಅವರೊಂದಿಗೆ ಹೊರಟರು. ಬಹಳ ಚಿಕ್ಕ ವಯಸ್ಸಿನಲ್ಲಿಯೇ ಮಹಾನ್ ನಾಯಕರುಗಳ ಒಡನಾಟ ದೊರಕಿದ್ದು ಇವರ ಪುಣ್ಯವೇ ಸರಿ. ಮಾರ್ಗಮಧ್ಯೆ ಚಳುವಳಿಯ ಭಾಗವಾಗಿ ನಡೆಯುತ್ತಿದ್ದ ಮೆರವಣಿಗೆಯೊಂದರಲ್ಲಿ ಭಾಗವಹಿಸಿ ಪೂನಾ ಬಳಿಯ ವಿಶಾಪುರ ಜೈಲಿನಲ್ಲಿ ಕೆಲಕಾಲ ಸೆರೆವಾಸ ಅನುಭವಿಸಿದರು. ನಂತರ ಅಲ್ಲಿಂದ ಸೇವಾಗ್ರಾಮಕ್ಕೆ ತೆರಳಿ ಗಾಂಧೀಜಿಯವರನ್ನು ನೇರವಾಗಿ ಕಂಡು ಧನ್ಯರಾದರು. ಸೇವಾಗ್ರಾಮದಲ್ಲಿ ಸುಮಾರು ೧೦ ತಿಂಗಳು ವಾಸವಿದ್ದರು. ಶಾಲಾ ವಿದ್ಯಾರ್ಥಿಯೊಬ್ಬ ಶಾಲೆ ಬಿಟ್ಟು ಸೇವಾಗ್ರಾಮದಲ್ಲಿ ಇರುವುದನ್ನು ನೋಡಿದ ಗಾಂಧೀಜಿಯವರು ಅವನಿಗೆ ಹಿಂತಿರುಗಿ ವಿದ್ಯಾಭ್ಯಾಸ ಮುಂದುವರೆಸುವಂತೆ ಸೂಚನೆ ನೀಡಿದರು. ಮಹಾತ್ಮರ ಆಣತಿಯಂತೆ ಅಲ್ಲಿಂದ ಮೈಸೂರಿಗೆ ಮರಳಿ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಆಶ್ರಮಕ್ಕೆ ಹೋಗುವಾಗ ಸಾಮಾನ್ಯ ಹುಡುಗನಾಗಿದ್ದ ಬಸವನಾಯಕರು ಅಲ್ಲಿಂದ ಮರಳುವಾಗ ಅಪ್ಪಟ ಗಾಂಧೀವಾದಿಯಾಗಿದ್ದರು. ಮಹಾತ್ಮರ ಪ್ರಭಾವಕ್ಕೆ ಒಳಪಟ್ಟು ಸರಳವಾದ ಜೀವನವನ್ನು ಮೈಗೂಡಿಸಿಕೊಂಡರು. ಮಾಂಸಾಹಾರವನ್ನು ಸಂಪೂರ್ಣವಾಗಿ ತ್ಯಜಿಸಿ ಸಸ್ಯಾಹಾರವನ್ನು ಸೇವಿಸುತ್ತಿದ್ದರು. ಮೈಸೂರಿನ ಮಹಾರಾಜರು ಒಮ್ಮೆ ಬನುಮಯ್ಯ ಶಾಲೆಗೆ ಭೇಟಿ ನೀಡಿದಾಗ ಇವರಿಗೆ ಚಿತ್ರಕಲೆಯಲ್ಲಿ ಇದ್ದ ಆಸಕ್ತಿಯನ್ನು ಗಮನಿಸಿ ಇವರನ್ನು ಬಾಂಬೆಯ ಜೆ.ಜೆ. ಚಿತ್ರಕಲಾ ಶಾಲೆಯಲ್ಲಿ ಕಲಿಯಲು ಶಿಫಾರಸು ಮಾಡಿದರು. ಬಾಂಬೆಗೆ ತೆರಳಿದ ಬಸವನಾಯಕರು ದೇಶದ ಪ್ರತಿಷ್ಠಿತ ಚಿತ್ರಕಲಾ ಶಾಲೆಯಲ್ಲಿ ಪ್ರವೇಶ ಪಡೆಯುವಲ್ಲಿ ಯಶಸ್ವಿಯಾದರು. ಬಾಂಬೆಯ ಸಮೀಪವಿರುವ ಬೋರಿಬಂದರ್‌ನಲ್ಲಿದ್ದ ಮೊಗವೀರ ಸಂಘದಲ್ಲಿ ತಂಗುವ ವ್ಯವಸ್ಥೆಯಾಯಿತು. ಹೆಚ್.ಕೆ.ಪುತ್ರನ್‌ರವರು ಸಂಘದ ಕಾರ್ಯದರ್ಶಿಗಳಾಗಿದ್ದರು. 'ಮೊಗವೀರ' ಎಂಬ ಮಾಸಪತ್ರಿಕೆ ಹೊರಡುತ್ತಿದ್ದು ಅದಕ್ಕೆ ಚಂದಾದಾರರ ವಿಳಾಸವನ್ನು ಬರೆದು ಅಂಚೆಗೆ



ಹಾಕುವುದನ್ನು ನಾಯಕರಿಗೆ ವಹಿಸಲಾಗಿತ್ತು. ೩ ವರ್ಷ ತಮಗೆ ವಹಿಸಿದ್ದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಮೆಚ್ಚುಗೆಗೆ ಪಾತ್ರರಾದರು. ಬಾಂಬೆಯಲ್ಲಿದ್ದಾಗ ಭೂದಾನ ಚಳುವಳಿ ಆರಂಭವಾಗಿ ಅದರಿಂದ ಪ್ರಭಾವಿತರಾದರು. ವಿನೋಬಾ ಭಾವೆಯವರ ಪ್ರಭಾವಕ್ಕೆ ಒಳಗಾದ ಬಸವನಾಯಕರು ೧೯೫೩ ರಲ್ಲಿ ಭೂದಾನ ಚಳುವಳಿಯ ಭಾಗವಾಗಿದ್ದ ಪಾದಯಾತ್ರೆಯಲ್ಲಿ ಪಾಲ್ಗೊಂಡು ಬಿಹಾರದ ಬುದ್ಧಗಯಾದಲ್ಲಿ ನಡೆದ ಸಮಾವೇಶದಲ್ಲಿ ಭಾಗವಹಿಸಿದರು. ಅಲ್ಲಿ ಇವರಿಗೆ 'ಲೋಕಸೇವಕ' ಎಂದು ಧೃಢೀಕರಣ ಪತ್ರ ನೀಡಲಾಯಿತು. ಇಂತಹ ಅನುಭವಗಳನ್ನು ಹೊತ್ತು ಬಸವನಾಯಕರು ಊರಿಗೆ ಹಿಂದಿರುಗಿದರು. ಹೀಗೆ ಬಿಟ್ಟರೆ ದೇಶಾಂತರ ಹೊರಟು ಹೋಗುವನೆಂದು ಆತಂಕಕ್ಕೆ ಒಳಗಾದ ಸಂಬಂಧಿಕರು ಚೆನ್ನಮ್ಮನವರೊಡನೆ ೧೯೫೩ ರಲ್ಲಿ ವಿವಾಹವನ್ನು ನೆರವೇರಿಸಿದರು. ವಿವಾಹ ಬಂಧನಕ್ಕೆ ಒಳಗಾದರೂ ಚಳುವಳಿಯ ನಂಟನ್ನು ಕಳೆದುಕೊಳ್ಳಲಿಲ್ಲ. ಬೇರಂಬಾಡಿಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡರು. ಹಗಲು ಹೊತ್ತು ಕೃಷಿ ಕೆಲಸಗಳಲ್ಲಿ ತೊಡಗಿರುತ್ತಿದ್ದ ರೈತರಿಗೆ, ಮಹಿಳೆಯರಿಗೆ, ಮಕ್ಕಳಾದಿಯಾಗಿ ಎಲ್ಲರಿಗೂ ಊರಿನ ಚಾವಡಿಯಲ್ಲಿ ಸಂಜೆಯ ಹೊತ್ತು ಓದು ಬರಹ ಕಲಿಸುತ್ತಿದ್ದರು. ಜಾತಿ, ಮತ, ಲಿಂಗಭೇದವಿಲ್ಲದೆ ಎಲ್ಲರಿಗೂ ವಿದ್ಯಾದಾನ ಮಾಡಿದ ಮಹಾನ್ ಚೇತನ. ಅನಕ್ಷರಸ್ಥರಾಗಿದ್ದ ತಮ್ಮ ಪತ್ನಿಗೆ ಓದುವುದನ್ನು, ಬರೆಯುವುದನ್ನು ಕಲಿಸಿದ್ದರು. ಬೇರಂಬಾಡಿಯ ಚಾವಡಿಯಲ್ಲಿ ಇವರಿಂದ ವಿದ್ಯಾದೀಕ್ಷೆ ಪಡೆದು ಮಕ್ಕಳು ಮುಂದೆ ಉನ್ನತ ಹುದ್ದೆಗಳನ್ನು ಅಲಂಕರಿಸಿದರು. ಗ್ರಾಮಗಳ ಉದ್ಧಾರವಾದರೆ ದೇಶವು ಉದ್ಧಾರವಾಗುತ್ತದೆ ಎಂಬುದನ್ನು ಅಕ್ಷರಶಃ ಸಾಧಿಸಿ ತೋರಿಸಿದರು. ಸರ್ವೋದಯ ಮೇಳಗಳಿಗೆ ತಪ್ಪದೇ ಹಾಜರಾಗುತ್ತಿದ್ದರು. ೧೯೫೭ರಲ್ಲಿ ಕೇರಳದ ಕಾಲಡಿಯಲ್ಲಿ ನಡೆದ ಸರ್ವೋದಯ ಮೇಳದಲ್ಲಿ ಭಾಗವಹಿಸಿದ್ದ ಶ್ರೀ ಜಯಪ್ರಕಾಶ ನಾರಾಯಣರು, ಸರ್ವೋದಯ ಸಂಘದ ಅಧ್ಯಕ್ಷರಾಗಿದ್ದ ದಾದಾ ಧರ್ಮಾಧಿಕಾರಿ, ಕಾರ್ಯದರ್ಶಿಯಾಗಿದ್ದ ಕಾಕಾ ಕಾಲೇಲ್ಕರ್ ಮೊದಲಾದವರು ಬೆಂಗಳೂರಿಗೆ ಹಿಂದಿರುಗುವ ಮಾರ್ಗಮಧ್ಯದಲ್ಲಿ ಬೇರಂಬಾಡಿಯ ಬಸವನಾಯಕರ ಮನೆಗೆ ಭೇಟಿ ನೀಡಿದ್ದರು. ತಮ್ಮ ನಿಸ್ಪೃಹ ಸೇವೆಯಿಂದ ಗುಂಡ್ಲುಪೇಟೆಯ ಸಾಧಾರಣ ಹಳ್ಳಿಯಾದ ಬೇರಂಬಾಡಿಯು ರಾಷ್ಟ್ರನಾಯಕರ ಗಮನ ಸೆಳೆಯುವಂತೆ ಮಾಡಿದರು. ಅಷ್ಟೇ ಅಲ್ಲದೆ ೧೯೫೮ ರಲ್ಲಿ ನಡೆದ ಅಖಂಡ ಕರ್ನಾಟಕ

ಭೂದಾನ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು. ಧಾರವಾಡದ ಮಾತೆ ಮಹಾದೇವಿಯ ಆಶ್ರಮ ಹಾಗೂ ಕೂಡಲ ಸಂಗಮದಲ್ಲಿ ನಡೆಯುವ ಶರಣಮೇಳಗಳಲ್ಲಿ ಸ್ವಯಂಸೇವಕರಾಗಿ ದುಡಿಯುತ್ತಿದ್ದರು. ಎನಗಿಂತ ಕಿರಿಯರಿಲ್ಲ ಎಂಬ ಮನೋಭಾವವನ್ನು ಹೊಂದಿದ್ದ ಬಸವನಾಯಕರು ಎಂದೂ ಪ್ರಚಾರವನ್ನು ಬಯಸಿದವರಲ್ಲ. ಸ್ವಾತಂತ್ರ್ಯ ಹೋರಾಟಗಾರರಾದ ಹೆಚ್.ಎಸ್. ದೊರೆಸ್ವಾಮಿ, ಮೇಲುಕೋಟೆಯ 'ಜನಪದ ಟ್ರಸ್ಟ್' ನ ಸುರೇಂದ್ರ ಕೌಜಲಗಿಯವರೊಂದಿಗೆ ಒಡನಾಟವನ್ನು ಹೊಂದಿದ್ದರು. ಮಹಾತ್ಮ ಗಾಂಧಿ ಹಾಗೂ ವಿನೋಬಾ ಭಾವೆಯವರು ತೋರಿಸಿಕೊಟ್ಟ ಹಾದಿಯಲ್ಲಿ ನಡೆದ ಬಸವನಾಯಕರು ಎಲೆಮರೆಯ ಕಾಯಿಯಂತಿದ್ದು ೨೨.೦೬.೨೦೧೮ ರಂದು ಕಾಲವಾದರು. ಬಸವನಾಯಕರ ಆದರ್ಶಯುತ ಜೀವನವನ್ನು ಬೇರಂಬಾಡಿಯ ಜನ ಇಂದಿಗೂ ಸ್ಮರಿಸುತ್ತಾರೆ. ಅವರು ಜಾತ್ಯತೀತ, ಧರ್ಮಾತೀತ ವ್ಯಕ್ತಿಯಾಗಿ ಬಾಳಿದರು.


## 'ಚಿಕ್ಕತುಪ್ಪೂರಿನ ಗಾಂಧಿ' ಕಾಳವೀರಪ್ಪ.



ಇವರು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಚಿಕ್ಕತುಪ್ಪೂರಿನಲ್ಲಿ ಜನಿಸಿದರು. ಬಾಲ್ಯದಿಂದಲೂ ಉತ್ತಮ ಗುಣ ಹಾಗೂ ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದ ಕಾಳವೀರಪ್ಪನವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಿದ್ದರು. ಒಮ್ಮೆ ಪೋಲೀಸರು ಇವರನ್ನು ಚಿಕ್ಕಬಳ್ಳಾಪುರ ಜೈಲಿಗೆ ಕರೆದುಕೊಂಡು ಹೋದರು. ಆದರೆ ಮೈಸೂರು ಪ್ರಾಂತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಉತ್ತುಂಗದಲ್ಲಿದ್ದ ಕಾಲವದು. ಎಲ್ಲಾ ಜೈಲುಗಳು ಕಿಕ್ಕಿರಿದು ತುಂಬಿದ್ದವು. ಬಂಧಿತರಾಗಿ ಕರೆದುಕೊಂಡು ಬಂದಿದ್ದ ಸತ್ಯಾಗ್ರಹಿಗಳಿಗೆ ಜೈಲುಗಳಲ್ಲಿ ಸ್ಥಳಾವಕಾಶವಿಲ್ಲದೆ ಅವರನ್ನು ನೀಲಗಿರಿ, ಬಂಡೀಪುರ ಮೊದಲಾದ ಕಾಡುಗಳಿಗೆ ಕರೆದುಕೊಂಡು ಹೋಗಿ ಅಲ್ಲಿ ಬಿಡುತ್ತಿದ್ದರು. ಹೀಗೆ ಕಾಳವೀರಪ್ಪನವರನ್ನು ಬಂಡೀಪುರದ ದಟ್ಟಕಾಡಿನಲ್ಲಿ ಇಳಿಸಿ ಪೊಲೀಸರ ವಾಹನ ಹೊರಟು ಹೋಯಿತು. ಅದೃಷ್ಟವಶಾತ್ ವನ್ಯಮೃಗಗಳ ದಾಳಿಗೆ ತುತ್ತಾಗದೆ ನಡೆದು ಊರು ಸೇರಿದರು. ಸ್ಥಳೀಯರಾಗಿದ್ದರಿಂದ ಹಾಗೂ ಕಾಡಿನ ಅಂಚಿನಲ್ಲಿ ಹುಟ್ಟಿ ಬೆಳೆದದ್ದರಿಂದ ಅವರು ತಮ್ಮ ಊರು ತಲುಪುವುದು ಸಾಧ್ಯವಾಯಿತು. ಭಾರತ ಸ್ವಾತಂತ್ರ್ಯ ಗಳಿಸಿದ ಮೇಲೆ ಸರ್ಕಾರ ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡುವ ಸವಲತ್ತುಗಳನ್ನು ನಿರಾಕರಿಸಿದರು. ಮುಂದೆ ನಿಂತು ತಮ್ಮೊಂದಿಗೆ ಹೋರಾಟದಲ್ಲಿ ಭಾಗವಹಿಸಿದ್ದ ಸತ್ಯಾಗ್ರಹಿಗಳಿಗೆ ಸರ್ಕಾರದ ಸೌಲಭ್ಯಗಳನ್ನು ದೊರಕಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಉತ್ತಮ ಸಂಘಟನಾಕಾರರಾಗಿದ್ದ ಕಾಳವೀರಪ್ಪನವರೊಂದಿಗೆ ತಂಬಿಶೆಟ್ಟಿ, ಬಿಸಿಲುಶೆಟ್ಟರು, ಪಡಗೂರಿನ ಸಂಪತ್ತು, ಗುರುಮಲ್ಲಪ್ಪ, ಹುಚ್ಚಪ್ಪ, ನಾಗಮಲ್ಲಪ್ಪ ಮೊದಲಾದವರು ಸೇರಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದರು. ಚಿಕ್ಕತುಪ್ಪೂರಿನಲ್ಲಿ ಏಳನೇ ತರಗತಿಯವರೆಗೆ ಮಾತ್ರ ಶಾಲೆಯಿತ್ತು. ಮುಂದಿನ ವಿದ್ಯಾಭ್ಯಾಸಕ್ಕೆ ಮಕ್ಕಳು ಬೇರೆ ಊರಿಗೆ ಹೋಗಬೇಕಾಗಿತ್ತು. ಅನೇಕ ಹೆಣ್ಣುಮಕ್ಕಳು ಶಿಕ್ಷಣ ಮುಂದುವರೆಸದೆ ಶಿಕ್ಷಣವನ್ನು ಮೊಟಕುಗೊಳಿಸುತ್ತಿದ್ದರು. ಇದರಿಂದ ನೊಂದ ಕಾಳವೀರಪ್ಪನವರು ತಮ್ಮ ಎರಡು ಎಕರೆ ಜಮೀನನ್ನು ಶಾಲೆಗೆ ದಾನವಾಗಿ ನೀಡಿ ಚಿಕ್ಕತುಪ್ಪೂರಿನಲ್ಲಿ ಪ್ರೌಢಶಾಲೆ ತೆರೆಯಲು ಕಾರಣೀಭೂತರಾದರು. ನೂರಾರು ಮಕ್ಕಳು ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಸುಮಾರು ೨೦ ವರ್ಷಗಳ ಕಾಲ ತಮ್ಮ ಜಮೀನಿನಲ್ಲಿದ್ದ ಕೊಳವೆಬಾವಿಯಿಂದ ಇಡೀ ಗ್ರಾಮಕ್ಕೆ ಕುಡಿಯುವ ನೀರನ್ನು ಒದಗಿಸಿದ್ದರು. ಇಂದಿಗೂ ಗ್ರಾಮಸ್ಥರು ಇವರ ನ್ಯಾಯತತ್ಪರತೆ, ಪ್ರಾಮಾಣಿಕತೆ, ಸಾಮಾಜಿಕ ಕಳಕಳಿಯನ್ನು ಸ್ಮರಿಸುತ್ತಾರೆ. ಕಾಡಿನಿಂದ ತಪ್ಪಿಸಿಕೊಂಡು ಅಕಸ್ಮಿಕವಾಗಿ ತಮ್ಮ ಊರಿಗೆ ಬಂದ ಚಿಪ್ಪುಹಂದಿಯನ್ನು ರಕ್ಷಿಸಿ ಮೈಸೂರು ಪ್ರಾಣಿ ಸಂಗ್ರಹಾಯಲದ ಅಧಿಕಾರಿಗಳಿಗೆ ಒಪ್ಪಿಸಿದರು. ಇದು ಅವರು ಪ್ರಾಣಿಗಳ ಬಗ್ಗೆ ಹೊಂದಿದ್ದ ಕಾಳಜಿ ಹಾಗೂ ಅಹಿಂಸಾ ಮನೋಭಾವನೆಯನ್ನು ಎತ್ತಿತೋರಿಸುತ್ತದೆ. ಇವರನ್ನು 'ಚಿಕ್ಕತುಪ್ಪೂರಿನ ಗಾಂಧಿ' ಎಂದು ಕರೆದಿರುವುದು ಸೂಕ್ತವಾಗಿದೆ. ಹೋರಾಟದ ಸಮಯದಲ್ಲಿ ಮೈಗೂಡಿಸಿಕೊಂಡಿದ್ದ ಆದರ್ಶಗಳನ್ನು ತಮ್ಮ ಬದುಕಿನುದ್ದಕ್ಕೂ ಅನುಸರಿಸಿದರು ಎಂಬುದಕ್ಕೆ ಅವರ ಬದುಕು ಒಂದು ಉದಾಹರಣೆಯಾಗಿದೆ. ತಮ್ಮ ತಂದೆಯವರ ಹೋರಾಟ, ಗ್ರಾಮದ ಬಗ್ಗೆ ಹೊಂದಿದ್ದ ಅತೀವ ಕಳಕಳಿಯನ್ನು ಅವರ ಮಗ ಮಹೇಶ್‌ರವರು ನೆನೆದರು. ೯೫ ವರ್ಷಗಳ ತುಂಬು ಜೀವನವನ್ನು ನಡೆಸಿದರು.

ಭೌತಿಕವಾಗಿ ಇಲ್ಲವಾದರೂ ಸಹ ಕಾಳವೀರಪ್ಪನವರ ಆದರ್ಶಯುತ ಬದುಕಿನ ಕುರುಹುಗಳನ್ನು ನಾವು ಇಂದಿಗೂ ಕಾಣಬಹುದಾಗಿದೆ.


## ಎ.ಬೋರಯ್ಯ



ಇವರು ಗುಂಡ್ಲುಪೇಟೆ ತಾಲ್ಲೂಕಿನ ಕುರುಬ ಜನಾಂಗಕ್ಕೆ ಸೇರಿದ ಅಂದಾನಯ್ಯ ಹಾಗೂ ನರಸಮ್ಮನವರ ಹಿರಿಯ ಪುತ್ರ. ೧೯೪೦ ರಿಂದ ಕಾಂಗ್ರೆಸ್ ಕಾರ್ಯಕರ್ತರಾಗಿ ಸೇರ್ಪಡೆಗೊಂಡರು. ೬ ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದರು. ಉನ್ನತ ಶಿಕ್ಷಣ ಪಡೆಯದೇ ಇದ್ದರೂ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಬೇಕೆಂಬ ಇಚ್ಛೆ ಅದಮ್ಯವಾಗಿತ್ತು. ತಮ್ಮ ಸ್ನೇಹಿತರಾದ ಜಿ.ವಿ. ಪರಮೇಶ್ವರಶೆಟ್ಟಿಯವರ ಜೊತೆಗೂಡಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಮನೆಯಲ್ಲಿ ಅವರ ತಂದೆ ತಾಯಿ ತಮ್ಮ ಮಗ ಜೈಲಿಗೆ ಹೋದರೆ ತಮ್ಮ ಗತಿಯೇನೆಂದು ಆತಂಕಗೊಂಡು ಮಗ ಚಳುವಳಿಯಲ್ಲಿ ಭಾಗವಹಿಸದಂತೆ ತಡೆಯಲು ಯತ್ನಿಸಿದರು. ಬೋರಯ್ಯನವರ ಉತ್ಸಾಹಕ್ಕೆ ಯಾವುದೂ ತಡೆಯಾಗಲಿಲ್ಲ. ಮನೆಯವರ ವಿರೋಧವನ್ನು ಲೆಕ್ಕಿಸದೆ 'ಚಲೇ ಜಾವ್ ಚಳುವಳಿ' ಯಲ್ಲಿ ಭಾಗವಹಿಸಿದರು. ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಜಾರಿಗಾಗಿ ನಡೆದ 'ಮೈಸೂರು ಚಲೋ' ಹೋರಾಟದಲ್ಲಿಯೂ ಸಹ ಭಾಗವಹಿಸಿದ್ದರು. ವೃತ್ತಿಯಿಂದ ಕೃಷಿಕರಾಗಿದ್ದ ಇವರು ಸ್ವಾತಂತ್ರ್ಯ ಬಂದ ನಂತರ ಕೃಷಿಕ ವೃತ್ತಿಯಲ್ಲಿ ಮುಂದುವರೆದರು. ತಮ್ಮ ಜೀವನದ ಕೊನೆಯವರೆಗೂ ಗಾಂಧೀವಾದಿಗಳಾಗಿದ್ದು, ಸದಾ ಖಾದಿ ಬಟ್ಟೆಯನ್ನು ಧರಿಸಿರುತ್ತಿದ್ದರು. ಸತ್ಯ ಮತ್ತು ಅಹಿಂಸೆಯನ್ನು ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದರು. ತಾವು ಮೈಗೂಡಿಸಿಕೊಂಡು ಬಂದಿದ್ದ ಮೌಲ್ಯಗಳನ್ನು ಕೇವಲ ಚಳುವಳಿಗಳಿಗೆ ಸೀಮಿತಗೊಳಿಸದೆ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುಂದಿನ ಪೀಳಿಗೆಗೆ ದಾರಿದೀಪಗಿರುವ ಇಂತಹ ಮಹನೀಯರೇ ನಮ್ಮ ದೇಶದ ಸ್ವಾತಂತ್ರ್ಯಗಾಥೆಯ ಜೀವಾಳ.




## ಹೆಚ್.ಎಲ್.ನಾಗೇಗೌಡ



ಲಕ್ಕೇಗೌಡ ಹಾಗೂ ಚಿಕ್ಕಹೊನ್ನಮ್ಮನವರ ಪುತ್ರರಾಗಿ ಜನಿಸಿದ ಇವರು ವೃತ್ತಿಯಿಂದ ಕೃಷಿಕರಾಗಿದ್ದರು. ಗುಂಡ್ಲುಪೇಟೆಯಲ್ಲಿ ಪ್ರತಿದಿನ ನಡೆಯುತ್ತಿದ್ದ ಪ್ರಭಾತ್‌ಪೇರಿ, ಪ್ರತಿಭಟನೆ, ಹೋರಾಟವು ಇವರ ಮೇಲೆ ಪ್ರಭಾವ ಬೀರಿತು. ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ 'ಮೈಸೂರು ಚಲೋ' ಚಳುವಳಿಯಲ್ಲಿ ಭಾಗವಹಿಸಿದರು. ಆಗ ಅವರು ಕೇವಲ ೧೪ ವರ್ಷದ ಬಾಲಕ. ಪೊಲೀಸರು ಇವರನ್ನು ಬಂಧಿಸಿ ನಂಜನಗೂಡು ಜೈಲಿನಲ್ಲಿಟ್ಟಿದ್ದರು. ಕ್ಷಮೆಯಾಚನೆ ಬರೆದುಕೊಡುವಂತೆ ಒತ್ತಾಯಿಸಿದಾಗ ನಾಗೇಗೌಡರು ಪ್ರತಿಭಟಿಸಿದರು. ಪೊಲೀಸರ ದೌರ್ಜನ್ಯಕ್ಕೆ ಜಗ್ಗದೆ ಕ್ಷಮೆಯಾಚಿಸಲು ನಿರಾಕರಿಸಿದರು. ಇವರನ್ನು ನಂಜನಗೂಡಿನಿಂದ ಮೈಸೂರು ಜೈಲಿಗೆ ವರ್ಗಾಯಿಸಲಾಯಿತು. ೧೦.೦೯.೧೯೪೭ ರಿಂದ ೨೫.೦೯.೧೯೪೭ ರವರೆಗೆ ಮೈಸೂರು ಜೈಲಿನಲ್ಲಿ ಸೆರೆವಾಸವನ್ನು ಅನುಭವಿಸಿ ಬಿಡುಗಡೆ ಹೊಂದಿದರು. ಮುಂದೆ ಕೃಷಿಕ ವೃತ್ತಿಯಲ್ಲಿ ತೊಡಗಿ ಬದುಕು ಸಾಗಿಸಿದರು. ಸದಾ ಸತ್ಯ, ಅಹಿಂಸೆಯ ದಾರಿಯಲ್ಲಿ ನಡೆದರು.

## ಬರಗಿ ನಾಗಮಲ್ಲಪ್ಪ



ಇವರು ಬರಗಿಯ ಶ್ರೀ ಲಿಂಗಪ್ಪ ಮತ್ತು ಮಾದಮ್ಮ ದಂಪತಿಗಳಿಗೆ ೧೯೨೮ ಆಗಸ್ಟ್ ೭ ರಂದು ಜನಿಸಿದರು. ಇಂಟರ್ ಮೀಡಿಯೆಟ್‌ವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಗುಂಡ್ಲುಪೇಟೆಯಲ್ಲಿ ಕ್ವಿಟ್ ಇಂಡಿಯಾ ಚಳುವಳಿಯು ನಡೆಯುತ್ತಿದ್ದು ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಸಂಘಟನೆಯಲ್ಲಿ ಎತ್ತಿದ ಕೈ. ಮುಂದೆ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದರು.


ಕೆ.ಎಸ್, ನಾಗರತ್ನಮ್ಮನವರು, ನಜೀರ್‌ಸಾಬ್ ಅವರೊಂದಿಗೆ ರಾಜಕೀಯ ಒಡನಾಟವನ್ನು ಹೊಂದಿದ್ದ ಇವರು ಗುಂಡ್ಲುಪೇಟೆ ತಾಲ್ಲೂಕಿನ ಏಳಿಗೆಗೆ ಬದುಕಿನುದ್ದಕ್ಕೂ ಶ್ರಮಿಸಿದರು. ೧೫.೧೧.೨೦೧೫ ರಂದು ಕಾಲವಾದರು.

**ಕರಿಶೆಟ್ಟಿ**



ಹೊಂಗನೂರು ಮಾದಶೆಟ್ಟಿ ಹಾಗೂ ಸಿದ್ದಮ್ಮನವರ ಸುಪುತ್ರ. ಗುಂಡ್ಲುಪೇಟೆಯಲ್ಲಿ ಚಿಲ್ಲರೆ ವ್ಯಾಪಾರ ನಡೆಸುತ್ತಿದ್ದರು. 'ಮೈಸೂರು ಚಲೋ' ಚಳುವಳಿಯಲ್ಲಿ ಭಾಗವಹಿಸುತ್ತಿದ್ದ ಇವರ ಸ್ನೇಹಿತರಿಗೆ ನೆರವು ನೀಡುತ್ತಿದ್ದರು. ಹೋರಾಟಗಾರರಿಗೆ ನೆರವು ನೀಡುತ್ತಿದ್ದ ಇವರನ್ನು ಪೊಲೀಸರು ಬಂಧಿಸಿ ಮೈಸೂರು ಜೈಲಿಗೆ ತಳ್ಳಿದರು. ಬಿಡುಗಡೆಯಾದ ನಂತರ ಎಂದಿನಂತೆ ತಮ್ಮ ಕಸುಬಿನಲ್ಲಿ ನಿರತರಾಗಿ ಜೀವನ ಸವೆಸಿದರು. ಗುಂಡ್ಲುಪೇಟೆಯ ಅನೇಕ ಸಾರ್ವಜನಿಕ ಕಾರ್ಯಗಳಿಗೆ ನೆರವಾಗುತ್ತಿದ್ದರು. ಸದಾ ಖಾದಿ ಬಟ್ಟೆ ಹಾಗೂ ಗಾಂಧಿ ಟೋಪಿಯನ್ನು ಧರಿಸುತ್ತಿದ್ದರು. ವಿದೇಶಿ ವಸ್ತ್ರಗಳನ್ನು ಎಂದಿಗೂ ಬಳಸಲಿಲ್ಲವೆಂಬುದು ಗಮನಾರ್ಹ.

**ರಾಚನಾಯಕ**



ಚಿಕ್ಕತುಪ್ಪೂರಿನ ಸಿದ್ದನಾಯಕ ಮತ್ತು ಸಿದ್ದಮ್ಮನವರ ಪುತ್ರರಾಗಿದ್ದ ರಾಚನಾಯಕರು ಎಲೆತೋಟದಲ್ಲಿ ಕೆಲಸ ಮಾಡುತ್ತಿದ್ದರು. ಎಲೆ ಮಾರುವ ಸಲುವಾಗಿ ಒಮ್ಮೆ ಮೈಸೂರಿಗೆ ಹೋಗಿದ್ದಾಗ ಅಲ್ಲಿ ನಡೆಯುತ್ತಿದ್ದ ಮೈಸೂರು ಚಲೋ ಚಳುವಳಿಯ ಮೆರವಣಿಗೆಯಲ್ಲಿ ತಮ್ಮ ಸ್ನೇಹಿತರ ಜೊತೆಗೂಡಿ ಭಾಗವಹಿಸಿದರು. ಇವರನ್ನು ಬಂಧಿಸಿದ ಪೊಲೀಸರು ನಂಜನಗೂಡಿನ ಜೈಲಿನಲ್ಲಿ ಕೆಲಕಾಲ ಇಟ್ಟಿದ್ದರು. ನಂತರ ಮೈಸೂರು ಜೈಲಿಗೆ ವರ್ಗಾಯಿಸಿದರು. ಜೈಲಿನಿಂದ ಬಿಡುಗಡೆಯಾದ ನಂತರ ಎಂದಿನಂತೆ ತಮ್ಮ ಎಲೆತೋಟದ ಕೆಲಸವನ್ನು ಮುಂದುವರೆಸಿದರು. ಸಾಮಾನ್ಯ ಜನರನ್ನು ಚಳುವಳಿಗಳು ಸೆಳೆಯುತ್ತಿದ್ದವು ಎಂಬುದಕ್ಕೆ ರಾಚನಾಯಕರು ಸಾಕ್ಷಿಯಾಗಿದ್ದಾರೆ. ಭಾರತಾಂಬೆಯನ್ನು ಸಂಕೋಲೆಗಳಿಂದ ಬಿಡುಗಡೆಗೊಳಿಸುವಲ್ಲಿ ಮುಂಚೂಣಿ ನಾಯಕರು ವಹಿಸಿದಷ್ಟೇ ಪ್ರಮುಖ ಪಾತ್ರವನ್ನು ಸಾಮಾನ್ಯ ಜನರು ವಹಿಸಿದರು.


**ಪುಟ್ಟವೀರಪ್ಪನಾಯಕ**



ಪುಟ್ಟವೀರಪ್ಪ ನಾಯುಕರ ತಂದೆ ಅಲಗನಾಯಕ ಮತ್ತು ತಾಯಿ ಚಿಕ್ಕಮ್ಮ. ಜೀವನೋಪಾಯಕ್ಕಾಗಿ ಬೀಡಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. 'ಮೈಸೂರು ಚಲೋ' ಚಳುವಳಿಯಲ್ಲಿ ಬೀಡಿ ಕಾರ್ಖಾನೆಯ ಕೆಲಸಗಾರರು ಸಕ್ರಿಯುವಾಗಿ ತೊಡಗಿಕೊಂಡಿದ್ದರು. ಪುಟ್ಟವೀರಪ್ಪ ನಾಯಕರು ಸಹ 'ಮೈಸೂರು ಚಲೋ' ಚಳುವಳಿಯಲ್ಲಿ ಭಾಗವಹಿಸಿದಾಗ ಅವರನ್ನು ಬಂಧಿಸಿ ಪೊಲೀಸರು ಮೈಸೂರು ಜೈಲಿಗೆ ಕಳುಹಿಸಿದರು. ಬಿಡುಗಡೆಯಾದ ಮೇಲೆ ಬೀಡಿ ಕಾರ್ಖಾನೆ ಕೆಲಸದಲ್ಲಿ ಮುಂದುವರೆದರು. ಸ್ವಾತಂತ್ರ್ಯದ ಕಿಚ್ಚು ಬೀಡಿ ಕಾರ್ಮಿಕರವರೆಗೂ ಮುಟ್ಟಿತ್ತು ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಸಾಮಾನ್ಯರಲ್ಲಿ ಅತಿ ಸಾಮಾನ್ಯರಾದ ಜನರೂ ಸಹ ಸ್ವಾತಂತ್ರ್ಯಕ್ಕಾಗಿ, ಜವಾಬ್ದಾರಿ ಸರ್ಕಾರಕ್ಕಾಗಿ ಹಂಬಲಿಸುತ್ತಿದ್ದರು. ಚಳುವಳಿಯಲ್ಲಿದ್ದಾಗ ಕಲಿತ ಆದರ್ಶಗಳು ಕೊನೆಯವರೆಗೂ ಇವರು ದಾರಿದೀಪವಾಗಿ ನಡೆಸಿದವು.


**ಕಾಳನಾಯಕ**

ಹೊಸೂರಿನ ಸೋಮನಾಯಕ ಮತ್ತು ಮಾದಮ್ಮನವರ ಪುತ್ರ. ಇವರು ಬೀಡಿ ಕಾರ್ಮಿಕರಾಗಿದ್ದು ಬೀಡಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಇವರು ತಮ್ಮ ಸಹೋದ್ಯೋಗಿಗಳನ್ನು ಮೈಸೂರು ಚಲೋ ಚಳುವಳಿಗೆ



ಸೇರುವಂತೆ ಪ್ರಚೋದಿಸುತ್ತಿದ್ದರು. ಇದನ್ನು ಗಮನಿಸಿದ ಪೊಲೀಸರು ಇವರನ್ನು ಬಂಧಿಸಿ ಮೈಸೂರು ಜಿಲ್ಲೆಗೆ ಕಳುಹಿಸಿದರು. ಜೈಲಿನಿಂದ ಹಿಂದಿರುಗಿದ ನಂತರ ತಮ್ಮ ಕಾಯಕದಲ್ಲಿ ತೊಡಗಿ ತಮ್ಮ ಬದುಕನ್ನು ಸವೆಸಿ ಕಾಲವಾದರು.

**ದೊಡ್ಡೇಗೌಡ**



ಗುಂಡ್ಲುಪೇಟೆಯ ಚಿಕ್ಕೇಗೌಡ ಹಾಗೂ ಬಿಕ್ಕಮ್ಮನವರ ಪುತ್ರ. ಇವರು ಕೃಷಿಕರಾಗಿದ್ದರು. ಗುಂಡ್ಲುಪೇಟೆಯಲ್ಲಿ ನಡೆದ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಬಂಧನಕ್ಕೊಳಗಾಗಿ ಮೈಸೂರು ಜಿಲ್ಲೆಯಲ್ಲಿ ಸೆರೆವಾಸವನ್ನು ಅನುಭವಿಸಿದರು. ಬಿಡುಗಡೆಯಾದ ನಂತರ ಕೃಷಿಕ ವೃತ್ತಿಯಲ್ಲಿ ಮುಂದುವರೆದರು. ಕೊನೆಯವರೆಗೂ ಸತ್ಯ, ಅಹಿಂಸೆಯನ್ನು ವ್ರತದಂತೆ ಪಾಲಿಸಿದರು.


**ರಂಗನಾಯಕ**



ಗುಂಡ್ಲುಪೇಟೆಯಲ್ಲಿ 'ಮೈಸೂರು ಚಲೋ' ಚಳುವಳಿ ಬಹಳ ಭರದಿಂದ ಸಾಗುತ್ತಿತ್ತು. ಶಾಲೆ ಕಾಲೇಜುಗಳನ್ನು ತೊರೆದು ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಭಾಗವಹಿಸುತ್ತಿದ್ದರು. ಪೊಲೀಸರು ಹೋರಾಟದಲ್ಲಿ ಭಾಗವಹಿಸಿದವರನ್ನು ಚಿತ್ರಹಿಂಸೆಗೆ ಒಳಪಡಿಸುತ್ತಿದ್ದರು. ಇದನ್ನು ಕಂಡು ರೊಚ್ಚಿಗೆದ್ದ ರಂಗನಾಯಕರು ಪೊಲೀಸರ ಮೇಲೆ ತಿರುಗಿಬಿದ್ದರು. ಇವರನ್ನು ಬಂಧಿಸಿ ಮೈಸೂರು ಜೈಲಿಗೆ ಹಾಕಿದರು. ಚಳುವಳಿಗೆ ಧುಮುಕಿದ್ದ ವಿದ್ಯಾರ್ಥಿಗಳ ಬಗ್ಗೆ ಇವರಿಗೆ ಅಪಾರ ಕಾಳಜಿ ಇತ್ತು. ಮೈಸೂರಿನ ಜೈಲಿನಿಂದ ಬಿಡುಗಡೆ ಹೊಂದಿದ ಮೇಲೆ ಬೀಡಿ ಕಟ್ಟುವ ತಮ್ಮ ಕಾಯಕವನ್ನು ಮುಂದುವರೆಸಿದರು.




**ಮಾದಯ್ಯ**




ಗುಂಡ್ಲುಪೇಟೆಯ ಹರಿಜನಕೇರಿಯವರಾದ ಮಾದಯ್ಯನವರ ತಂದೆ ಮಾದಯ್ಯ ಮತ್ತು ತಾಯಿ ಬಸಮ್ಮ. ಗುಂಡ್ಲುಪೇಟೆಯ ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದರು. ಗಾಂಧೀಜಿಯವರು ಹರಿಜನರ ಏಳಿಗೆಗೋಸ್ಕರ ನಡೆಸುತ್ತಿದ್ದ ಕಾರ್ಯಕ್ರಮಗಳು ಇವರ ಮನಸ್ಸಿನ ಮೇಲೆ ಸಾಕಷ್ಟು ಪರಿಣಾಮ ಬೀರಿತು. ವಿದ್ಯಾರ್ಥಿಗಳು ಗುಂಡ್ಲುಪೇಟೆಯಲ್ಲಿ ನಡೆಯುತ್ತಿದ್ದ 'ಮೈಸೂರು ಚಲೋ' ಮೆರವಣಿಗೆಯಲ್ಲಿ ಭಾಗವಹಿಸುತ್ತಿದ್ದರು. ಇವರನ್ನು ವ್ಯಾನಿನಲ್ಲಿ ತುಂಬಿದ ಪೊಲೀಸರು ಮೈಸೂರಿನ ಜೈಲಿಗೆ ಹಾಕಿದರು. ಬಿಡುಗಡೆಯಾದ ಮೇಲೆ ಹರಿಜನರಲ್ಲಿ ಗಾಂಧಿಯ ತತ್ವಗಳನ್ನು ಹರಡುವ ಕೆಲಸ ಮಾಡಿದರು.

**ಪಾಪಣ್ಣ**



ಸಿದ್ದೇಗೌಡ ಮತ್ತು ನಾಗಮ್ಮನವರ ಮಗನಾಗಿ ಜನಿಸಿದರು. ಬಿ. ದೊಡ್ಡೇಗೌಡರ ನೇತೃತ್ವದಲ್ಲಿ ಗುಂಡ್ಲಪೇಟೆಯಲ್ಲಿ 'ಮೈಸೂರು ಚಲೋ' ಚಳುವಳಿ ನಡೆಯುತ್ತಿತ್ತು. ಪಾಪಣ್ಣನವರು ತಮ್ಮ ಸ್ನೇಹಿತರ ಜೊತೆಗೂಡಿ ಮೆರವಣಿಗೆಯಲ್ಲಿ ಭಾಗವಹಿಸಿದರು. ಬಂಧಿತರಾಗಿ ಮೈಸೂರು ಜೈಲಿನಲ್ಲಿದ್ದರು. ಇಳಿವಯಸ್ಸಿನಲ್ಲಿಯೂ ಗಾಂಧಿ ತತ್ವಗಳ ಪ್ರಚಾರದಲ್ಲಿ ತೊಡಗಿದ್ದರು.

## ಮಾಯೇಗೌಡ



ಕೃಷಿಕರಾದ ಮಾಯೇಗೌಡರು ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದರು. ಪೊಲೀಸರು ಲಾಠಿ ಚಾರ್ಜು ನಡೆಸುತ್ತಿದ್ದುದನ್ನು ಕಂಡು ಸಿಡಿದೆದ್ದರು. ಪೊಲೀಸರ ದೌರ್ಜನ್ಯದ ವಿರುದ್ಧ ಕಿಡಿಕಾರಿದರು. ಬಂಧಿತರಾಗಿ ಜೈಲಿನಲ್ಲಿದ್ದು ನಂತರ ಬಿಡುಗಡೆಯಾದರು. ತಮ್ಮ ಮುಂದಿನ ಜೀವನವನ್ನು ಕೃಷಿಯಲ್ಲಿ ತೊಡಗಿಸಿಕೊಂಡರು.

## ಲಕ್ಷ್ಮಯ್ಯ



ಇವರ ವಾಸಸ್ಥಳ ಗುಂಡ್ಲುಪೇಟೆಯ ಹರಿಜನಕೇರಿ. ತಂದೆ ಮುದ್ದುಬಸವಯ್ಯ ತಾಯಿ ಅಂಕಮ್ಮ. ಕಡುಬಡವರಾಗಿದ್ದ ಇವರು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದರು. ಗಾಂಧೀಜಿ ಹಾಗೂ ಇತರೆ ನಾಯಕರು ರಾಷ್ಟ್ರಮಟ್ಟದಲ್ಲಿ ಹರಿಜನರ ಉದ್ಧಾರಕ್ಕಾಗಿ ದುಡಿಯುತ್ತಿದ್ದರು. ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರ ಏಳಿಗೆಗಾಗಿ ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಇದರಿಂದ ಸ್ಫೂರ್ತಿ ಪಡೆದು ಅನೇಕ ದಲಿತರು ಚಳುವಳಿಗಳಲ್ಲಿ ಭಾಗವಹಿಸಿದರು. ಇದರಲ್ಲಿ ಲಕ್ಷ್ಮಯ್ಯನವರು ಒಬ್ಬರು.ಮೈಸೂರು ಚಲೋ ಚಳುವಳಿಯಲ್ಲಿ ಪಾಲ್ಗೊಂಡು ಸೆರೆವಾಸ ಅನುಭವಿಸಿದರು.

## ಎಸ್.ಮಾದನಾಯಕ



ಗುಂಡ್ಲುಪೇಟೆಯಲ್ಲಿ ಬೀಡಿ ಕಾರ್ಮಿಕರಾಗಿದ್ದ ಇವರು ತಮ್ಮ ಸ್ನೇಹಿತರಾಗಿದ್ದ ಹುಚ್ಚೇಗೌಡರ ಜೊತೆಗೂಡಿ ಚಳುವಳಿಗಳಲ್ಲಿ ಭಾಗವಹಿಸಿ ಪೊಲೀಸರಿಂದ



ಲಾಠಿಯೇಟಿನ ರುಚಿ ಕಂಡರು. 'ಮೈಸೂರು ಚಲೋ' ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಪೊಲೀಸರು ಇವರನ್ನು ಬಂಧಿಸಿ ಮೈಸೂರು ಸೆಂಟ್ರಲ್ ಜೈಲಿಗೆ ಕಳುಹಿಸಿದರು. ಸೆರೆವಾಸ ಅನುಭವಿಸಿ ಬಿಡುಗಡೆ ಹೊಂದಿದರು. ಮೈಸೂರು ಪ್ರಾಂತ್ಯದಲ್ಲಿ ಜವಾಬ್ದಾರಿ ಸರ್ಕಾರ ರಚನೆಯಾದಾಗ ಇಂತಹವರ ತ್ಯಾಗ, ಹೋರಾಟಗಳು ಸಾರ್ಥಕವಾಯಿತು.


## ನಾಗನಾಯಕ

ಸಿದ್ದನಾಯಕ ಹಾಗೂ ನಾಗಮ್ಮ ದಂಪತಿಗಳ ಮಗನಾಗಿದ್ದ ಇವರು ವೃತ್ತಿಯಿಂದ ಬೀಡಿ ಕಾರ್ಮಿಕರಾಗಿದ್ದರು. ಚಳುವಳಿಗಳಲ್ಲಿ ಕಾರ್ಮಿಕರು ಬಹಳ ಮುಖ್ಯವಾದ ಪಾತ್ರವನ್ನು ವಹಿಸಿದ್ದ ಕಾಲ. ನಾಗನಾಯಕರು ಗುಂಡ್ಲುಪೇಟೆ ಹಾಗೂ ನಂಜನಗೂಡುಗಳಲ್ಲಿ ನಡೆದ ಹೋರಾಟದಲ್ಲಿ ಭಾಗವಹಿಸಿದರು. ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ ಜೈಲುವಾಸ ಅನುಭವಿಸಿದರು. ಬಿಡುಗಡೆಯಾದ ಮೇಲೆ ಬೀಡಿ ಕಾರ್ಮಿಕರಾಗಿ ಉಳಿದು, ಜೀವನ ಸಾಗಿಸಿದರು. ಕೊನೆಯವರೆಗೂ ಕಟ್ಟಾ ಗಾಂಧೀವಾದಿಯಾಗಿದ್ದರು.

## ಬಾಲಚಂದ್ರಶೆಟ್ಟಿ

ನೇಕಾರರಾಗಿದ್ದ ಸುಬ್ರಮಣ್ಯಶೆಟ್ಟಿ ಹಾಗೂ ಅಂಕಮ್ಮನವರ ಪುತ್ರರಾಗಿದ್ದ ಇವರಿಗೆ ಖಾದಿ ಎಂದರೆ ಬಲು ಪ್ರೀತಿ. ಕೈಮಗ್ಗದಲ್ಲಿ ಖಾದಿ ಬಟ್ಟೆ ನೇಯ್ದು ಅದನ್ನು ಧರಿಸುತ್ತಿದ್ದರು. ಗಾಂಧೀಜಿಯವರ ಬಗ್ಗೆ ಅದಮ್ಯವಾದ ಗೌರವ, ಭಕ್ತಿ ಹೊಂದಿದ್ದರು. 'ಮೈಸೂರು ಚಲೋ' ಚಳುವಳಿಗೆ ಧುಮುಕಿ ಮೈಸೂರು ಜೈಲಿನಲ್ಲಿ ಬಂಧಿಯಾಗಿದ್ದರು. ಬಿಡುಗಡೆಯಾದ ನಂತರ ಕೈಮಗ್ಗದಲ್ಲಿ ಖಾದಿಯನ್ನು ನೇಯ್ದು ಮಾರಾಟ ಮಾಡುತ್ತಿದ್ದರು. ಗಾಂಧೀಜಿಯವರ ಸರಳವಾದ ಜೀವನ ಅವರನ್ನು ಪ್ರಭಾವಿಸಿತ್ತು.

## ದಶರಥಶೆಟ್ಟರು



ದಶರಥಶೆಟ್ಟರು 'ಮೈಸೂರು ಚಲೋ' ಚಳುವಳಿಯಲ್ಲಿ ಭಾಗವಹಿಸಿದ್ದರು. ಗುಂಡ್ಲುಪೇಟೆಯ ಪುರಸಭೆಯ ಆವರಣ ದಲ್ಲಿರುವ ಗಾಂಧಿ ಪ್ರತಿಮೆಯ

ನಿರ್ಮಾಣಕ್ಕೆ ಕಾರಣೀಭೂತರಾಗಿದ್ದಾರೆ. ತಮ್ಮ ಜೀವನವನ್ನು ಸಾರ್ವಜನಿಕರ ಸೇವೆಗೆ ಮೀಸಲಿಟ್ಟಿದ್ದರು.

## ಪರಾಮರ್ಶನ ಗ್ರಂಥಗಳು


೧. ಮೈಸೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಳು – ೧೯೯೪

೨. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು – (ಸಂಪುಟ ೧,೨,೩) – ಸೂರ್ಯನಾಥ ಕಾಮತ್

೩. ಮೈಸೂರು ಜಿಲ್ಲೆ ಗ್ಯಾಜೆಟಿಯರ್

೪. ಹೊನ್ನುಹೊಳೆ – ಚಾಮರಾಜನಗರ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಪುಟ ಸಂಪಾದಕರು : ಶ್ರೀ ಮಲೆಯೂರು ಗುರುಸ್ವಾಮಿ

೫. ಸಾಧಕನ ಬದುಕು – ಪಿ.ಸಿ.ರಾಜಶೇಖರ

೬. ರಾಜ್ಯ ಪತ್ರಾಗಾರ ಇಲಾಖೆಯ ಸಂಗ್ರಹ ಸಂಪುಟಗಳು.


## ಛಾಯಾಚಿತ್ರಗಳು



ಹೋರಾಟದ ಸಮಯದಲ್ಲಿ ಪ್ರಭಾತ್‌ಪೇರಿ ಹೊರಡುತ್ತಿದ್ದ ಗುಂಡ್ಲುಪೇಟೆಯ ಪುರಭವನ







ಪುರಭವನದ ಆವರಣದಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕ



ಮೈಸೂರು ಕಾಂಗ್ರೆಸ್ ನಾಯಕರು  ಜನರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಹುಣಸೆತೋಪಿನಲ್ಲಿ ಈಗ ನಿರ್ಮಾಣವಾಗಿರುವ ಸರ್ಕಾರಿ ಐಟಿಐ ಕಾಲೇಜು




ಭೂಗತ ಚಳುವಳಿಗಾರರಿಗೆ ಆಶ್ರಯತಾಣವಾಗಿದ್ದ ಬಿ.ದೊಡ್ಡೇಗೌಡರ ನಿವಾಸ. ಅವರ ಪುತ್ರ ಗೋಪಾಲ್‌ರವರು ತಮ್ಮ ತಂದೆಯ ಹೋರಾಟದ ದಿನಗಳನ್ನು ಕುರಿತು ವಿವರಿಸುತ್ತಿರುವುದು





ದೊಡ್ಡೇಗೌಡರ ಮನೆಯಲ್ಲಿ ಇಂದಿಗೂ ಪೂಜಿಸಲ್ಪಡುತ್ತಿರುವ ಭಾರತಮಾತೆ ಹಾಗೂ ರಾಷ್ಟ್ರನಾಯಕರ ಚಿತ್ರಪಟಗಳು





ಅಖಂಡ ಕರ್ನಾಟಕ ಭೂದಾನ ಪಾದಯಾತ್ರೆ

ಏಳು ತಿಂಗಳ ಕಾರ್ಯಪ್ರಗತಿ

| | |
|---|---|
| ಯಾತ್ರೆ ಆರಂಭವಾದ ದಿನ : | 17-6-1958 |
| ,, ,, ಸ್ಥಳ : | ಮೇಲುಕೋಟೆ |
| ಯಾತ್ರೆಯ ವ್ಯಾಪ್ತಿ : | 1700 ಮೈಲಿ |
| ಭೇಟಿಕೊಟ್ಟ ಊರುಗಳ ಸಂಖ್ಯೆ : | 215 |
| ಸಂಚರಿಸಿದ ಜಿಲ್ಲೆಗಳ ಸಂಖ್ಯೆ : | 12 |
| ಭೂದಾನ–ಸರ್ವೋದಯ ಸಾಹಿತ್ಯ ವಿಕ್ರಯ : | ರೂ. 5,500/- |
| 'ಭೂದಾನ' ಪತ್ರಿಕೆಗೆ ಕೂಡಿಸಿದ ಚಂದಾದಾರರ ಸಂಖ್ಯೆ : | 250 |
| ಭೂಮಿ ಹಂಚಿಕೆ : | 300 ಎಕರೆ |

ಪಾದಯಾತ್ರಿಕರು : ಶ್ರೀ ಅಪ್ಪಯ್ಯರ್
ಶ್ರೀ ಕುಟ್ಟಿ
ಶ್ರೀ ಸಾಮದೇವ ಶೆಟ್ಟಿ
ಶ್ರೀ ಬಸವನಾಯಕ
ಹಾಗೂ ಶ್ರೀ ವೆಂಕಟಪ್ಪ

ಬಸವನಾಯಕರು ಅಖಂಡ ಕರ್ನಾಟಕ ಭೂದಾನ ಪಾದ ಯಾತ್ರೆಯಲ್ಲಿ ಭಾಗವಹಿಸಿದ್ದ ವಿವರ(೧೯೫೮ ರಲ್ಲಿ ಪ್ರಕಟವಾದ ಸರ್ವೋದಯ ಪತ್ರಿಕೆಯ ವಿಶೇಷ ಸಂಚಿಕೆ)



ಜಯಪ್ರಕಾಶ ನಾರಾಯಣಯರು ಭೇಟಿ ನೀಡಿದ ಬೇರಂಬಾಡಿಯಲ್ಲಿರುವ ಬಸವನಾಯಕರ ಮನೆ





ಮಾತೆ ಮಹಾದೇವಿಯವರ ಆಶ್ರಮದಲ್ಲಿ ಸ್ವಯಂಸೇವಕರಾಗಿ ಕಾರ್ಯ ನಿರ್ವಹಿಸುತ್ತಿರುವ ಬಸವನಾಯಕರು



ಚಿಕ್ಕತುಪ್ಪೂರಿನ ಕಾಳವೀರಪ್ಪನವರ ನಿವಾಸ. ತಮ್ಮ ತಂದೆಯ ಆದರ್ಶಗಳನ್ನು ಅವರ ಪುತ್ರ ಮಹೇಶ್ ಇಂದಿಗೂ ಸ್ಮರಿಸುತ್ತಾರೆ




ಗುಂಡ್ಲುಪೇಟೆಯ ಕುರುಬಗೇರಿಯಲ್ಲಿರುವ ಎ. ಬೋರಯ್ಯನವರ ಮನೆ



ಶಿಥಿಲಾವಸ್ಥೆಯಲ್ಲಿರುವ ಕಾಳನಾಯಕರ ಮನೆ





Extract of Undertrial Register pertaining to the year 19
District Prison, Mysore.

1. Register No. — 8016
2. Name of the Prisoner with Father's or Husband's Name: — [illegible] S/O Lakkegowda
3. Date of admission into Jail. — 10.9.47
4. Sex, and whether married or single, widower, widow or prostitute. — Male- Single.
5. Race, Religion and Caste. — [illegible]
6. Occupation prior to committal. — Trade
7. District and Taluk. — Mysore
8. Town and Village — Gundlupet.
9. State of Education whether
 a) able to read and write — Literate.
 b) able to read only
 c) Illiterate.
10. Age on admission. — [illegible] years
11. Description & marks of identification.
12. Court by which remanded or committed for trial. — Special 1st Class Magistrate Nanjangud.
13. Number and date of warrant: — [illegible]
14. Offence of which accused.
15. Health (1) Good (2) Indifferent (3) Bad (on admission).
16. On disposal.
17. Disposal with date. — Released on [illegible].9.47 as per Order No. [illegible] dated [illegible].9.47 by the Dist. Magistrate, Mysore.
18. Authority.
19. Number in convict Register if convicted.
20. Particulars and values of property received with the prisoner or subsequently, with prisoner signature or left thumb print in acknowledgement or correctness.
21. Initials of Jailer and superintendent certifying correctness of entries.

/ Extract.
Sd/-
SUPERINTENDENT,
MYSORE JAIL, MYSORE.

No. [illegible]/81.
Office of the Superintendent, District Prison, Mysore Dated: 30th December 1981

Forwarded to Sri. [illegible] Gowda S/O Lakkegowda Resident of Gundlupet K.S.R.T.C. Driver with reference to his application dated [illegible].12.81.
Sd/-
Superintendent,
District Prison, Mysore.

ಹೆಚ್.ಎಲ್. ನಾಗೇಗೌಡರು ಸೆರೆವಾಸ ಅನುಭವಿಸಿದ ದಾಖಲೆ



**ಹೆಚ್.ಎಲ್.ನಾಗೇಗೌಡರ ಮನೆ**



**ಕರಿಶೆಟ್ಟಿಯವರ ಮನೆ**

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ<br>ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

೫೬ / ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ – ಗುಂಡ್ಲುಪೇಟೆ

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |